ಯಕ್ಷಗಾನ

ತ್ರಿಂಶತಿ

ಡಾ. ಸದಾಶಿವ ಭಟ್ಟ

- 2012 -

ಪ್ರಕಾಶಕರು

ಯಕ್ಷಗಾನ ಕೃತಿಸಂಪುಟ ಪ್ರಕಟಣ ಸಮಿತಿ, ನಿಡ್ವಳ್ಳಿ

163

ರವಿ ಮಡೋಡಿ

ಯಕ್ಷಗಾನ
ತ್ರಿಂಶತಿ

ಡಾ। ಡಿ. ಸದಾಶಿವ ಭಟ್ಟ

2012

ಪ್ರಕಾಶಕರು :
ಯಕ್ಷಗಾನ ಕೃತಿ ಸಂಪುಟ ಪ್ರಕಟಣ ಸಮಿತಿ
ನಿಡ್ಪಳ್ಳಿ

Yakshagana Trimshathi - A Collection of Yakshagana Prasangas in Kannada by Dr. D. Sadashiva Bhat, M.A. B.Ed, Ph.D. Vidwan, Visharada,
Pallu House, P.O. Nidpalli - 574259 Puttur D.K.
Ph : 08251-287274
Published by Yakshagana Krithi Samputa Prakatana Samithi Nidpalli

ಪ್ರಥಮ ಮುದ್ರಣ : 2012

ಹಕ್ಕುಗಳು : ಲೇಖಕರದ್ದು

ಪುಟಗಳು : x + 235

ಬೆಲೆ : 250/-

ಪ್ರಕಟಣ ಸಮಿತಿ :

ಎನ್. ಸಂಜೀವ ರೈ ಎಂ.ಎ. ಬಿ.ಎಡ್. ಬಿಪಿ.ಎಡ್
ಅಧ್ಯಕ್ಷರು

ಎನ್. ರಘುನಾಥ ರೈ
ಕಾರ್ಯದರ್ಶಿ

ಎನ್. ಸತ್ಯನಾರಾಯಣ ರೈ
ಸಂಚಾಲಕರು

ಬಿ. ವೆಂಕಟ್ರಮಣ ಬೋರ್ಕರ್, ಬಿ. ಸುಧಾಕರ ಭಟ್ಟ, ಎನ್. ರವಿ ಪ್ರಕಾಶ ರೈ,
ಬಿ. ವೆಂಕಟ್ರಾವ್ ಬೆಟ್ಟಂಪಾಡಿ
ಸದಸ್ಯರು

ಮುದ್ರಣ : ಶ್ರೀನಿಧಿ ಆಫ್‌ಸೆಟ್ ಪ್ರಿಂಟರ್ಸ್,
ವಿವೇಕಾನಂದ ಕಾಲೇಜು ರಸ್ತೆ, ನೆಹರುನಗರ
ಪುತ್ತೂರು ದ.ಕ.
e-mail : shreenidhipress@yahoo.com
Ph. : 08251-231272

ರವಿ ಮುಕ್ಕೋಡಿ

ಪ್ರಕಟಣ ಸಮಿತಿಯ ಪತಿಯಿಂದ

ಪುತ್ತೂರು ತಾಲೂಕು, ನಿಡ್ಪಳ್ಳಿ ಗ್ರಾಮದ ಪಳ್ಳು ಎಂಬಲ್ಲಿ ವಾಸ್ತವ್ಯವಿರುವ ಡಾ। ಡಿ. ಸದಾಶಿವ ಭಟ್ಟರ ಹೆಸರನ್ನು ಯಕ್ಷಗಾನ ಹಾಗೂ ಸಾಹಿತ್ಯ ಲೋಕದಲ್ಲಿ ಕೇಳದವರಿಲ್ಲ. ಶ್ರೀಯುತರು ಬಹುಭಾಷಾ ವಿದ್ವಾಂಸರು, ಯಕ್ಷಗಾನ, ಸಾಹಿತ್ಯ, ಭಾಷಾ ಕ್ಷೇತ್ರಗಳಲ್ಲಿ ಅವಿಸ್ಮರಣೀಯ ಸಾಧಕರು. ಪಂಡಿತ ಪರಂಪರೆಯ ಪಾಂಡಿತ್ಯ, ನವೀನ ಸಂಶೋಧನೆಯ ದೃಷ್ಟಿಕೋನ, ಅಪೂರ್ವ ಪ್ರತಿಭೆ, ಕ್ರಿಯಾಶೀಲ ವ್ಯಕ್ತಿತ್ವಗಳಿಂದ ಸಾರಸ್ವತ ಜಗತ್ತಿನಲ್ಲಿ ಈಗಾಗಲೇ ಪರಿಚಿತರು.

ಅಧ್ಯಯನ ಕಾಲದಿಂದಲೇ ಯಕ್ಷಗಾನದಲ್ಲಿ ಅತೀವ ಆಸಕ್ತಿ ಅರ್ಥಗಾರಿಕೆ, ವೇಷಗಾರಿಕೆಗಳಲ್ಲಿ ಸಾಕಷ್ಟು ಪರಿಶ್ರಮ, ಪ್ರಾವೀಣ್ಯ ಪಡೆದು ತಮ್ಮ ಖಾಸಗಿ ಹಾಗೂ ವೃತ್ತಿ ಜೀವನದುದ್ದಕ್ಕೂ ಯಕ್ಷಗಾನ ಕಲಾಕ್ಷೇತ್ರದಲ್ಲಿ ಅನನ್ಯ ಸಾಧನೆ ಮಾಡಿದರು. ಪ್ರಸಂಗ ರಚಿಸಿದರು, ಕೂಟ ಕಟ್ಟಿದರು, ಬಣ್ಣ ಹಚ್ಚಿದರು. ಕುಣಿದರು, ಕುಣಿಸಿದರು. ಸಂಘಸಂಸ್ಥೆಗಳಿಂದ, ಶಾಲಾಕಾಲೇಜುಗಳಿಂದ ಕರೆಬಂದಾಗ ಕಲಾಕೂಟವನ್ನು ಒಯ್ದು ಪ್ರದರ್ಶನ ಕೊಟ್ಟರು. ಆ ದಿನಗಳಲ್ಲಿ ಪ್ರದರ್ಶನಕ್ಕಾಗಿ ಭಟ್ಟರು ರಚಿಸಿದ ಬಹುತೇಕ ಕನ್ನಡ ಯಕ್ಷಗಾನ ಪ್ರಸಂಗಗಳು ಹಸ್ತಪ್ರತಿಗಳಲ್ಲಿಯೇ ಉಳಿದಿವೆ. ಕತ್ತಲೆಯ ಗರ್ಭದಲ್ಲಿ ಮರೆಯಾಗಿ ಹೋಗುವ ಮುನ್ನ, ಅವುಗಳಲ್ಲಿ ಕೆಲವನ್ನಾದರೂ ಬೆಳಕಿಗೆ ತರುವ ಸದುದ್ದೇಶದಿಂದ ಇದೀಗ ಡಾ। ಡಿ. ಸದಾಶಿವ ಭಟ್ ಅವರ "ಯಕ್ಷಗಾನ ಪ್ರಸಂಗಗಳ ಪ್ರಕಟಣ ಸಮಿತಿ"ಯನ್ನು ರಚಿಸಿ ರಂಗದಲ್ಲಿ ಪ್ರದರ್ಶನಗೊಂಡು ಮಿಂಚಿದ, ಪುರಾಣಾಂತರ್ಗತವಾದ ಮೂವತ್ತು ಪ್ರಸಂಗಗಳನ್ನು ಪ್ರಕಟಣೆಗೆ ಆಯ್ದುಕೊಂಡಿದ್ದೇವೆ. ಅವರು ಬರೆಯುತ್ತ ಇರುವುದರಿಂದ ಇನ್ನೂ ಕೆಲವು ಪ್ರಸಂಗಗಳು ಉಳಿದಿವೆ.

ಡಾ। ಭಟ್ಟರ ಪ್ರಸಂಗ ರಚನಾ ಕೌಶಲವೇ ವಿಶಿಷ್ಟ. ಕೂಟಗಳಲ್ಲಿ ಅಥವಾ ಸಂಘ ಸಂಸ್ಥೆಗಳಲ್ಲಿ ವೇಷಧಾರಿಗಳ ಸಂಖ್ಯೆಗನುಗುಣವಾಗಿ ಪಾತ್ರ ಸೃಷ್ಟಿ ಮಾಡುವುದು, ಪಾತ್ರಧಾರಿಗಳ ವ್ಯಕ್ತಿತ್ವ, ಸಾಮರ್ಥ್ಯ, ಪಾಂಡಿತ್ಯಗಳನ್ನು ಗಣನೆಗೆ ತೆಗೆದುಕೊಂಡು ಪಾತ್ರ ನಿರ್ಮಾಣ ಮಾಡುವುದು. ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಂದ, ಸಂಘ ಸಂಸ್ಥೆಗಳಿಂದ ಇಂತಹುದೇ ಪ್ರಸಂಗ, ಇಂತಹುದೇ ಪಾತ್ರ ರಚನೆಯಾಗಬೇಕೆಂದಿದ್ದರೆ, ಅಂತೆಯೇ ಪ್ರಸಂಗ ರಚಿಸುವ ಪ್ರತಿಭಾ ಕೌಶಲ ಅವರದು. ಬಹಳಷ್ಟು ಪ್ರಸಂಗಗಳಿಗೆ ಅರ್ಥ ಸಾಹಿತ್ಯವನ್ನೂ ಬರೆದಿದ್ದಾರೆ. ಅದು ಸಾವಿರಗಟ್ಟಲೆ ಪುಟಗಳಿರಬಹುದು. ಹಾಗಾಗಿ ಅದನ್ನೆಲ್ಲ ಪ್ರಕಟಣೆಯಿಂದ ಕೈಬಿಟ್ಟಿದ್ದೇವೆ.

ಹಿಂದಿನ ಪ್ರಸಿದ್ಧ, ಪರಿಚಿತ ಪ್ರಸಂಗಗಳಾದ ದೇವೀ ಮಾಹಾತ್ಮ್ಯ, ಕೃಷ್ಣ ಸಂಧಾನ, ಪಾದುಕಾ ಪಟ್ಟಾಭಿಷೇಕ - ಮುಂತಾದ ಪ್ರಸಂಗಗಳಿಗೆ ಅರ್ಥ ಸಾಹಿತ್ಯ ರಚಿಸಿ, ವಿದ್ಯಾರ್ಥಿ, ವಿದ್ಯಾರ್ಥಿನಿಯರಿಂದ ಪ್ರಯೋಗ ಮಾಡಿಸಿದ್ದಾರೆ. ಒಂದು ಪ್ರಸಂಗವನ್ನು

ಹಲವು ಬಾರಿ ಪ್ರಯೋಗ ಮಾಡುವ ಸಂದರ್ಭಗಳಲ್ಲಿ ವಿಮರ್ಶಕರ, ವಿಶ್ಲೇಷಕರ ಅಭಿಪ್ರಾಯಗಳಿಗೆ ಮನ್ನಣೆ ಕೊಟ್ಟು ಸೂಕ್ತ ಮಾರ್ಪಾಟುಗಳನ್ನು ಮಾಡಿಕೊಂಡಿದ್ದಾರೆ.

ಡಾ। ಭಟ್ಟರು ಬಹುಭಾಷಾ ವಿದ್ವಾಂಸರೆಂದು ಆಗಲೇ ಹೇಳಿದ್ದೇವೆ. ಅವರ ಕನ್ನಡ ಪ್ರಸಂಗಗಳನ್ನು ಪ್ರಕಟಿಸಲು ಮುಂದಾದ ಮೇಲೆ ಇತರ ಭಾಷಾ ಪ್ರಸಂಗಗಳಾದ ಇಂಗ್ಲೀಷ್, ಹಿಂದಿ, ಕರ್ಹಾಡಿ, ಕೊಂಕಣಿ, ಮರಾಠಿ, ಹವ್ಯಕ ಕನ್ನಡ, ತುಳು ಪ್ರಸಂಗಗಳನ್ನು ಕೂಡಾ ಪ್ರಕಟಿಸುವುದೆಂದು ತೀರ್ಮಾನಿಸಿ, ಪ್ರಕೃತ ಅವುಗಳನ್ನೂ ಪ್ರಕಟಣೆಗೆ ಕೈಗೆತ್ತಿಕೊಂಡಿದ್ದೇವೆ.

ಇನ್ನೊಂದು ಮುಖ್ಯ ವಿಚಾರವೇನೆಂದರೆ, ಅನ್ಯ ಭಾಷಾ ಪ್ರಸಂಗಗಳನ್ನು ಇತರ ಯಕ್ಷಗಾನ ಕವಿಗಳು ರಚಿಸಿರಲೂಬಹುದು. ಪ್ರಯೋಗಿಸಿಯೂ ಇರಬಹುದು. ಆದರೆ ಪ್ರಕಟಣೆಗೊಂಡದ್ದು ಈ ತನಕ ನಮ್ಮ ಗಮನಕ್ಕೆ ಬಂದಿಲ್ಲ. ಈ ನಿಟ್ಟಿನಲ್ಲಿ ಡಾ। ಡಿ. ಸದಾಶಿವ ಭಟ್ಟರದ್ದು ಒಂದು ದಾಖಲೆಯಾದರೆ, ನಮ್ಮ ಪ್ರಕಟಣೆಯು ಇನ್ನೊಂದು ದಾಖಲೆಯೆನ್ನಬಹುದು. ಯಕ್ಷಗಾನದ ಕವಿಗಳು ಹೆಚ್ಚಾಗಿ ಛಂದಸ್ಸಿನ ಬಗ್ಗೆ ನಿಗಾ ವಹಿಸಿದಂತೆ ಕಂಡುಬರುವುದಿಲ್ಲ. ಇದೊಂದು ಹಾಡುಗಬ್ಬವೆನ್ನುವ ಕಾರಣ ಇರಲೂಬಹುದು. ಆದರೆ ಇವರು ಯಾವುದೇ ಭಾಷೆಯಲ್ಲಿ ಯಕ್ಷಗಾನ ಬರೆಯಲಿ ಅಲ್ಲಿ ಛಂದೋಭಂಗವಾಗದಂತೆ ಸಾಕಷ್ಟು ಎಚ್ಚರ ವಹಿಸುತ್ತಾರೆ.

"ವಧ" ಶುದ್ಧರೂಪ - "ವಧೆ" ಈಗಿನ ರೂಢಿಗತ ರೂಪ, ಎರಡು ಪಂಗಡದವರಿಗೂ ಖುಶಿಯಾಗಲು ಎರಡೂ ರೂಪವನ್ನಿಟ್ಟುಕೊಂಡಿದ್ದಾರೆ. ಇಂತಹ ಇನ್ನೂ ಕೆಲವು ಪ್ರಯೋಗಗಳಿವೆ. ಶ್ರೀಯುತರ ಪ್ರಸಂಗಗಳು 1 ಗಂಟೆಯಿಂದ ಹಿಡಿದು 8 ಗಂಟೆಯತನಕ ಪ್ರದರ್ಶಿಸಲು ಅನುಕೂಲವಾಗುವಂತಿವೆ. ನಾವು ಹೀಗೆ ಪ್ರದರ್ಶಿಸಿದ್ದೇವೆ. ಉದಾ : ವೇನವಧ - ಪೃಥು ಚಕ್ರವರ್ತಿ, ಲಕ್ಷ್ಮೀಶಾಪ - ಸೀತಾ ಜನನ, ವೇದವತಿ ಶಾಪ - ರಾವಣ ದಿಗ್ವಿಜಯ- ಹೀಗೆ ಒಟ್ಟಾಗಿ, ಯಾ ಬೇರೆ ಬೇರೆಯಾಗಿಯೂ ಪ್ರಯೋಗಿಸಬಹುದು. ಸಮಯಾನುಕೂಲಕ್ಕೆ ತಕ್ಕಂತೆ ರಚಿತವಾಗಿವೆ.

ಪ್ರಯೋಗಶೀಲರಾದ ಭಟ್ಟರು ಒಂದೇ ಪ್ರಸಂಗವನ್ನು ಬೇರೆ ಬೇರೆ ಭಾಷೆಗಳಲ್ಲಿಯೂ ರಚಿಸಿದ್ದಾರೆ. ಉದಾ:- ಊರ್ಮಿಳೆ, ಶಿವಚಂದ್ರ, ವೀರ ಸುಷೇಣ ಮುಂತಾದುವು. ಯಕ್ಷಗಾನ ಕ್ಷೇತ್ರದಲ್ಲಿ, ಇಂದಿನ ದಿನಗಳಲ್ಲಿ ಬಗೆಬಗೆಯ ಪ್ರಯೋಗಗಳು ನಡೆಯುತ್ತಿರುವುನ್ನು ನಾವು ನಿತ್ಯ ಕಾಣುತ್ತಿದ್ದೇವೆ. ಕೇಳುತ್ತಿದ್ದೇವೆ. ಇಂತಹ ನವೀನ ಪ್ರಯೋಗಗಳ ಸಾಲಿನಲ್ಲಿ ಡಾ। ಡಿ. ಸದಾಶಿವ ಭಟ್ಟರ ಕೊಡುಗೆಯೂ ಒಂದು ಅಪೂರ್ವ ದಾಖಲೆಯಾಗಿ ನಿಲ್ಲುತ್ತದೆ ಎಂಬುವುದರಲ್ಲಿ ಎರಡು ಮಾತಿಲ್ಲ.

ಡಾ। ಡಿ. ಸದಾಶಿವ ಭಟ್ಟರ ಈ ಅಪೂರ್ವ ಯಕ್ಷಗಾನ ಕೃತಿ ಸಂಪುಟಗಳ ಪ್ರಕಟಣೆಗೆ ಉದಾರಧನ ಸಹಾಯವಿತ್ತ ಯಕ್ಷಗಾನ ಪ್ರೇಮಿಗಳಿಗೆ ಪ್ರಕಟಣ ಸಮಿತಿಯ ವತಿಯಿಂದ ಹೃತ್ಪೂರ್ವಕ ಕೃತಜ್ಞತೆಗಳು. ಡಾ। ಸದಾಶಿವ ಭಟ್ಟರ ಮೇಲಿನ ಅನನ್ಯ

ಪ್ರೀತ್ಯಭಿಮಾನಗಳಿಂದ, ಪ್ರಕಟಣ ಸಮಿತಿಯೊಂದಿಗೆ ಕೈಜೋಡಿಸಿ, ಸರ್ವ ರೀತಿಯ ಸಹಕಾರ ಕೊಟ್ಟು ಪ್ರೋತ್ಸಾಹಿಸಿದ, ಪುತ್ತೂರು ತಾಲೂಕು ಘಟಕದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ, ಡಾ। ವರದರಾಜ ಚಂದ್ರಗಿರಿಯವರಿಗೆ ಸಮಿತಿಯ ಅಧ್ಯಕ್ಷರು ಮತ್ತು ಸರ್ವಸದಸ್ಯರ ಮನದಾಳದ ನಮನಗಳು. ಈ ಯಕ್ಷಗಾನ ಕೃತಿ ಸಂಪುಟಗಳನ್ನು ಸಕಾಲಕ್ಕೆ ಅಂದವಾಗಿ ಮುದ್ರಿಸಿ ಕೊಟ್ಟ "ಶ್ರೀನಿಧಿ ಪ್ರಿಂಟರ್ಸ್", ಪುತ್ತೂರು ಇದರ ಮಾಲಕರಾದ ಶ್ರೀ ರಾಜೇಂದ್ರ ಪ್ರಸಾದ್ ಮತ್ತು ಸಿಬ್ಬಂದಿ ವರ್ಗದವರಿಗೆ ಅನಂತ ಪ್ರಣಾಮಗಳು. ಯಕ್ಷಗಾನ ಕಲಾ ಪ್ರೇಮಿಗಳು ಈ ಕೃತಿ ಸಂಪುಟಗಳನ್ನು ಓದಿ ಮೆಚ್ಚಿಕೊಂಡರೆ, ನಮ್ಮ ಶ್ರಮ ಸಾರ್ಥಕ. ಅಂತೆಯೇ ನಮ್ಮ ಪ್ರೀತಿ ವಿಶ್ವಾಸ, ಅಭಿಮಾನಗಳಿಗೆ ಪಾತ್ರರಾದ ಡಾ। ಡಿ. ಸದಾಶಿವ ಭಟ್ಟ ಅವರಿಗೆ ಭಗವಂತನು ಆಯುರಾರೋಗ್ಯ ಭಾಗ್ಯಗಳನ್ನು ದಯಪಾಲಿಸಲಿ, ಶ್ರೀಯುತರಿಂದ ಇನ್ನೂ ಹೆಚ್ಚಿನ ಕೃತಿಗಳು ಬೆಳಕು ಕಾಣುವಂತಾಗಲೆಂದು ಹಾರೈಸುತ್ತೇವೆ.

ಇತಿ,

ನುಳಿಯಾಲು ರಘುನಾಥ ರೈ

ಕಾರ್ಯದರ್ಶಿ

ಯಕ್ಷಗಾನ ಕೃತಿ ಸಂಪುಟ ಪ್ರಕಟಣ ಸಮಿತಿ, ನಿಡ್ಪಳ್ಳಿ.

ಲೇಖಕರ ಮಾತು

ಕನ್ನಡ, ತುಳು ಭಾಷೆಗಳಲ್ಲಿ ಸಾಕಷ್ಟು ಪ್ರಸಂಗಗಳು ಪ್ರಕಟವಾಗಿವೆ, ಆಗುತ್ತಿವೆ. ಆಟಕೂಟಗಳಿಗೆ ತಮಗೆ ಬೇಕಾದ ರೀತಿಯ ಪ್ರಸಂಗಗಳನ್ನು ತಾವೇ ರಚಿಸಿಕೊಂಡು ಪ್ರದರ್ಶಿಸುವುದು ಎಲ್ಲರಿಗೂ ಗೊತ್ತಿರುವ ವಿಚಾರವೇ. ನಾನು ಕನ್ನಡದಲ್ಲಿ, ತುಳುವಿನಲ್ಲಿ ಪ್ರಸಂಗಳನ್ನು ಬರೆದಿದ್ದರೂ ಪ್ರಕಟಿಸುವ ಕಾರ್ಯಕ್ಕೆ ಕೈಹಾಕಲಿಲ್ಲ. ಪ್ರಾಯೋಗಿಕವಾಗಿ ಅನ್ಯಭಾಷೆಗಳಲ್ಲಿ ಬರೆದು ಪ್ರಕಟಿಸಲು ಯತ್ನಿಸಿದೆ. ಹಲವಾರು ಮಂದಿ ಕನ್ನಡದ ಪ್ರಸಂಗಗಳನ್ನು ಯಾಕೆ ಪ್ರಕಟಿಸಲಿಲ್ಲವೆಂದು ಕೇಳುತ್ತಲೇ ಇದ್ದರು. ನನಗೂ ಇವರು ಕೇಳುವುದು ಸರಿಯೆನ್ನಿಸುತ್ತಿತ್ತು. ಪ್ರಸಂಗಗಳ ಸಂಖ್ಯೆ ಹೆಚ್ಚಾಗಿದ್ದುದರಿಂದ ಬಿಡಿಬಿಡಿಯಾಗಿ ಆಗಲಿ, ಯಾ ಒಟ್ಟಾಗಿ ಆಗಲಿ ಪ್ರಕಟಿಸಲಾಗದ ಅಸಹಾಯಕ ಸ್ಥಿತಿಯಲ್ಲಿದ್ದೆ. ಅಷ್ಟರಲ್ಲಿ ನನ್ನ ಮಿತ್ರರಾದ ಶ್ರೀ ಎನ್, ಸಂಜೀವ ರೈ, ಶ್ರೀ ಎನ್. ರಘುನಾಥ ರೈ, ಶಿಷ್ಯರಾದ ಶ್ರೀ ಎನ್. ಸತ್ಯನಾರಾಯಣ ರೈ ಇವರು ಸೇರಿಕೊಂಡು, "ಕನ್ನಡ ಯಕ್ಷಗಾನ ಕೃತಿ ಸಂಪುಟ ಪ್ರಕಟಣ ಸಮಿತಿ"ಯನ್ನು ರಚಿಸಿಕೊಂಡು ಪ್ರಸಂಗಗಳನ್ನು ಪ್ರಕಟಿಸುತ್ತಿರುವುದು ಅತೀವ ಸಂತೋಷವನ್ನುಂಟುಮಾಡಿದೆ. ನನ್ನ ಆಸೆ ನೆನಸಾಗಿದೆ. ಮೊದಲು ಕನ್ನಡ ಯಕ್ಷಗಾನಗಳನ್ನು ಪ್ರಕಟಿಸುವ ಉದ್ದೇಶವನ್ನಿಟ್ಟುಕೊಂಡಿದ್ದ ಪ್ರಕಟಣ ಸಮಿತಿ, ಅನಂತರ ನಾನು ಬರೆದ, ಕೊಂಕಣಿ, ಮರಾಠಿ, ಹಿಂದಿ, ಇಂಗ್ಲಿಷ್ ಮೊದಲಾದ ಬೇರೆ ಭಾಷೆಗಳ ಯಕ್ಷಗಾನಗಳನ್ನು ಜೊತೆಯಲ್ಲೇ ಪ್ರಕಟಿಸುತ್ತಿರುವುದು ಪ್ರಶಂಸಾರ್ಹವೇ ಸರಿ. ಇವರಿಗೆ ಹೇಗೆ ಕೃತಜ್ಞತೆ ಹೇಳುವುದೆಂದೇ ತಿಳಿಯುವುದಿಲ್ಲ.

ನನ್ನ ಗುರುಗಳಾದ ಕನ್ನಡದ ಓಜ ಮಾನ್ಯ ಪೆರಡಾಲ ಕೃಷ್ಣಯ್ಯ ಇವರು ಬರೆದ "ಯಾದವಾಭ್ಯುದಯ" ಯಕ್ಷಗಾನ ಪ್ರಸಂಗ ಪ್ರಕಟವಾಗಿತ್ತು. ಪೆರಡಾಲ ಮಹಾಜನ ಸಂಸ್ಕೃತ ಕಾಲೇಜಿನಲ್ಲಿ ಅಧ್ಯಾಪಕರು, ಊರಕಲಾವಿದರು, ವಿದ್ಯಾರ್ಥಿಗಳು ಸೇರಿಕೊಂಡು ನಾಲ್ಕೈದು ವರ್ಷ ಯಕ್ಷಗಾನಗಳನ್ನು ಮಾಡಿದರೂ, ಇವರ ಪ್ರಸಂಗವನ್ನು ಕೈಗೆತ್ತಿಕೊಂಡಿರಲಿಲ್ಲ. ಆ ಕೊರಗು ಅವರಲ್ಲಿತ್ತು. ಆದರೆ ಹೇಳುವಂತೆಯೂ ಇರಲಿಲ್ಲ. 1954ರಲ್ಲಿ ನಾನು ವಿದ್ವಾನಿನ ಅಂತಿಮ ವರ್ಷದ ವಿದ್ಯಾರ್ಥಿಯಾಗಿದ್ದೆ. ತೆಂಕಮನೆ ಗೋಪಾಲಕೃಷ್ಣ ಭಟ್ಟ ಎಂಬವರು ಹಳೆವಿದ್ಯಾರ್ಥಿಯಾಗಿದ್ದರು. ಅವರು, ನಾನು ಸೇರಿಕೊಂಡು ಯಾದವಾಭ್ಯುದಯವನ್ನು ಆಡಿದೆವು. ಗುರುಸಾಂದೀಪನಿಯ ಪಾತ್ರವನ್ನು ಮಾಡಲು ಗುರುಗಳಾದ ಮಾನ್ಯ ಕೃಷ್ಣಯ್ಯನವರನ್ನೇ ಒತ್ತಾಯಿಸಿದೆವು. ಇಳಿವಯಸ್ಸು. ಹೆಚ್ಚು ಮಾತಾಡಲೂ ಆಗುತ್ತಿರಲಿಲ್ಲ. ಆದರೂ ಒಪ್ಪಿಕೊಂಡರು. ವೇಷಹಾಕಿದರು. ಅವರ ಶಿಷ್ಯರಾದ ಗೋಪಾಲಕೃಷ್ಣ ಭಟ್ಟರು ಬಲರಾಮನ ಪಾತ್ರವನ್ನೂ ನಾನು ಕೃಷ್ಣನಪಾತ್ರವನ್ನೂ ಮಾಡಿದೆವು. ಅಷ್ಟರವರೆಗೆ ಯಾರೂ ಮಾಡದ ಕೆಲಸವ್ನು ನಾವು ಮಾಡಿದ್ದೆವು. ಅವರು ಅತೀವ ಸಂತುಷ್ಟರಾಗಿದ್ದರು. ಮುಂದೆ ನಾಲ್ಕೈದು ವಾರ ಯಕ್ಷಗಾನದ ಬಗ್ಗೆ ತರಗತಿಯಲ್ಲಿ ಪಾಠ ಮಾಡಿದರು. ಇಷ್ಟರವರೆಗೆ ನನ್ನ ಶಿಷ್ಯರಲ್ಲಿ

ಯಕ್ಷಗಾನದ ಬಗ್ಗೆ ಯಾರೂ ಕೆಲಸ ಮಾಡಲಿಲ್ಲ. ನೀನಾದರೂ ಮಾಡು ಎಂದು ನನ್ನಲ್ಲಿ ಹೇಳಿದರು. ಅವರ ಅನುಗ್ರಹವೇ ನನಗೆ ಯಕ್ಷಗಾನದಲ್ಲಿ ಆಸಕ್ತಿ ಹುಟ್ಟಿ, ಕಿಂಚಿತ್ ಸೇವೆಯನ್ನಾದರೂ ಮಾಡಲು ಸಾಧ್ಯವಾಯಿತು ಎನ್ನುವುದರಲ್ಲಿ ಅನುಮಾನವಿಲ್ಲ. ನನ್ನ ಕಾರ್ಯವನ್ನು ನೋಡಿ ಸಂತೋಷ ಪಡಲು ಗುರುಗಳು ಈಗ ಇಲ್ಲ. ಆದರೆ ಆ ಸ್ಥಾನವನ್ನು ತುಂಬುತ್ತಿದ್ದಾರೆ ಅವರ ಮೊಮ್ಮಗನಾದ, ಪ್ರಾಂಶುಪಾಲ, ಪುತ್ತೂರು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೂ ಆದ ಮಾನ್ಯ ಡಾ. ವರದರಾಜ ಚಂದ್ರಗಿರಿಯವರು. ಇವರು ನಮ್ಮೊಂದಿಗೇ ಇದ್ದು, ಸರ್ವ ವಿಧದ ಸಲಹೆ ಸೂಚನೆ, ಸಹಕಾರವನ್ನೀಯುತ್ತಿರುವುದು ಯೋಗಾಯೋಗವೆಂದೇ ಹೇಳಬೇಕಾಗಿದೆ. ಇವರೆನ್ನೆಂದಿಗೂ ಮರೆಯುವಂತೆಯೇ ಇಲ್ಲ.

ಅರ್ಥ ಹೇಳುತ್ತಲೋ, ವೇಷ ಹಾಕುತ್ತಲೋ ವೃಥಾ ಕಾಲಕಳೆಯುತ್ತಿದ್ದ ನನ್ನಲ್ಲಿ ನಮ್ಮವರೇ ಆದ ಹಿರಿಯ ಭಾಗವತ, ಪ್ರಸಂಗಕರ್ತ ಕಡಂದೇಲು ವಾಸುದೇವ ಭಟ್ಟ ಎಂಬವರು ನೀನು ಪ್ರಸಂಗ ಬರೆ ನೋಡುವ ಎಂದು ಆಗಾಗ ಹೇಳುತ್ತಿದ್ದರು. ಇದು ಪ್ರೋತ್ಸಾಹಿಸಲಿಕ್ಕಲ್ಲ ಎನ್ನುವುದು ನನಗೆ ಗೊತ್ತಿತ್ತು. ಹಾಗಾಗಿಯೇ ಪ್ರಯತ್ನಿಸಿದೆ. ಗುರುವಿನ ಅನುಗ್ರಹದಿಂದ ತಕ್ಕಮಟ್ಟಿಗೆ ಸಫಲತೆಯನ್ನೂ ಪಡೆದೆ. ಚಿಕ್ಕಚಿಕ್ಕ ಹಲವಾರು ಪ್ರಸಂಗಗಳನ್ನು ಬರೆದೆ, ಪ್ರಯೋಗಿಸಿದೆ. ಕಲಾಕೂಟಗಳಲ್ಲಿ, ಸಂಘ ಸಂಸ್ಥೆಗಳಲ್ಲಿ, ಶಾಲಾಕಾಲೇಜುಗಳಲ್ಲಿ, ಆಕಾಶವಾಣಿಗಳಲ್ಲಿ ಪ್ರಯೋಗಗೊಂಡವು.

ಸಂಸ್ಕೃತ, ಹಿಂದಿ, ಇಂಗ್ಲಿಷ್ ಭಾಷೆಗಳಲ್ಲಿ ಪ್ರಸಂಗ ರಚನೆ ಮಾಡಿ, ಇವುಗಳ ಧ್ವನಿಸುರುಳಿಗಳನ್ನು ಮಾಡಲು ಹೊರಟೆ. ಆಗ ಈ ಭಾಷೆಗಳಲ್ಲಿ ಹಾಡಬಲ್ಲ ಭಾಗವತರು ಯಾರು ಎನ್ನುವ ಪ್ರಶ್ನವಿದಿರಾಯಿತು. ನನ್ನ ಆತ್ಮೀಯ ಮಿತ್ರರಾಗಿದ್ದ ಶ್ರೀ ಕೆ. ಎನ್. ಭಟ್, ಶಿರಾಡಿಪಾಲರು, ನಮ್ಮವರೇ ಆದ ಬಿ. ದಿವಾಕರ ಪಟವರ್ಧನ್ ಎಂಬವರು ಬೆಳ್ತಂಗಡಿಯಲ್ಲಿದ್ದಾರೆ. ಅವರಲ್ಲಿ ಕೇಳಿ ನೋಡಿ ಎಂದರು. ಅವರಲ್ಲಿಗೆ ಓಡಿದೆ. ಅವರು ನನ್ನ ಬೇಡಿಕೆಯನ್ನು ಒಪ್ಪಿಕೊಂಡದ್ದಲ್ಲದೆ, ಸಾಕಷ್ಟು ಅಭ್ಯಾಸ ಮಾಡಿ, ನನ್ನ ಪ್ರಯೋಗಕ್ಕೆ ಸಹಕಾರವಿತ್ತರು. ಮೂರು ಭಾಷೆಯ ಧ್ವನಿಸುರುಳಿಗಳಲ್ಲಿಯೂ ಹಾಡಿದರು. ಮುಂದೆ ಕರ್ಹಾಡೀ ಭಾಷಾ ಧ್ವನಿಸುರುಳಿಯಲ್ಲಿಯೂ ಹಾಡಿದರು. ಇವರು ಹಾಡದೆ ಇರುತ್ತಿದ್ದರೆ ನನ್ನ ಆಸೆ ಕನಸಾಗಿಯೇ ಉಳಿಯುತ್ತಿತ್ತು. ಇವರಲ್ಲಿ ನಾನು ಮಾಡಿದ ಊಟ ಕಾಫಿಗಳಿಗೆ ಲೆಕ್ಕವಿಲ್ಲ. ಇವರ ಸಹಕಾರ, ಸೌಹಾರ್ದ ಮರೆಯುವಂತೆಯೇ ಇಲ್ಲ. ನನಗಾಗಿ ತುಂಬ ಶ್ರಮಪಟ್ಟವರು ಇವರು. ಇವರಿಗೆ ಅನಂತಾನಂತ ವಂದನೆಗಳು.

ಆಂಗ್ಲಭಾಷಾ ಯಕ್ಷಗಾನ ಪ್ರಸಂಗ - ಧ್ವನಿ ಸುರುಳಿಯ ಬಗ್ಗೆ ಮೂರು ಮಂದಿ ಆಂಗ್ಲಭಾಷಾ ವಿದ್ವಾಂಸರನ್ನು ಭೇಟಿಯಾದೆ. ಇವರು ಸಂತೋಷದಿಂದ ಸಕಾರಾತ್ಮಕವಾಗಿ ಸ್ಪಂದಿಸಿದರೂ, ಯಕ್ಷಗಾನದ ಬಗ್ಗೆ ಕೈಚೆಲ್ಲಿದರು. ಕಡೆಗೆ ಹೋಗಿ ಹೋಗಿ ನಿವೃತ್ತ ಪ್ರಾಂಶುಪಾಲರೂ, ಸದ್ಯ ಯಕ್ಷಗಾನ ಬಯಲಾಟ ಅಕಾಡಮಿಯ ಅಧ್ಯಕ್ಷರೂ ಆಗಿರುವ ಮಾನ್ಯ ಎಂ. ಎಲ್. ಸಾಮಗರಲ್ಲಿ ತಲಪಿದೆ. ಊಟ, ಕಾಫಿ ಕೊಟ್ಟರು. ಅವರ

ಆತ್ಮೀಯತೆಯನ್ನು ನೋಡಿ ದಂಗಾದೆ. ನನ್ನ ಕನಸನ್ನು ನೆನಸಾಗಿಸಿದರು. ತಿದ್ದಿ, ಸಲಹೆ, ಸೂಚನೆ ಸಹಕಾರವನ್ನಿತ್ತರು. ಇಂಗ್ಲಿಷ್, ಹಿಂದಿ, ಸಂಸ್ಕೃತ ಮೂರೂ ಭಾಷೆಗಳ ಧ್ವನಿ ಸುರುಳಿಗಳಲ್ಲಿ ಭಾಗವಹಿಸಿದರು. "ವಿದ್ಯೆ ವಿನಯ ಕೊಡುತ್ತದೆ. ವಿನಯ ಗೌರವವನ್ನು ಕೊಡುತ್ತದೆ ಎನ್ನುವ ಮಾತು ಗೌರವಾನ್ವಿತರಾದ, ವಿದ್ಯಾವಿನಯ ಸಂಪನ್ನರಾದ ಮಾನ್ಯ ಎಂ. ಎಲ್. ಸಾಮಗರಿಂದ ಸತ್ಯವಾಗಿದೆ ಎನ್ನುವುದರಲ್ಲಿ ಅನುಮಾನವಿಲ್ಲ. ಇವರು ಸಹಕರಿಸದೆ ಇರುತ್ತಿದ್ದರೆ ನನ್ನ ಆಶೆ ನಿರಾಶೆಯ ದಾರಿ ಹಿಡಿಯುತ್ತಿತ್ತೋ ಏನೋ? ಹೆಚ್ಚಿನ ವಿದ್ವಾಂಸರು ಕಾಗದ ಬರೆದರೆ ಉತ್ತರವೇ ಬರೆಯುವುದಿಲ್ಲ. ಆದರೆ ಎಷ್ಟೇ ಕಾರ್ಯಬಾಹುಲ್ಯ ಇದ್ದರೂ ಇವರು ಕಾಗದಕ್ಕೆ ಉತ್ತರ ಬರೆಯದೆ ಇರುವುದೇ ಇಲ್ಲ. ಇವರಿಗೆ ತುಂಬು ಹೃದಯದ ಕೃತಜ್ಞತೆಗಳು.

ಚೆಂಡೆಮದ್ದಳೆಯ ಬಗ್ಗೆ ನನಗೆ ಯಾವುದೇ ಆತಂಕ ಇರಲಿಲ್ಲ. ನನ್ನ ಭಾವನೆಂಟ ಶ್ರೀ ನಾಯಿತ್ತೋಡು ಮಾಧವ ಭಟ್ಟರು, ಮಿತ್ರರಾದ ಶ್ರೀ ಕೆ. ಪ್ರಕಾಶ ಬೋರ್ಕರ್ ಪೆರಗೇರಿ ಇವರು, ನಾನು ಹೇಳಿದಾಗ ಹೇಳಿದಲ್ಲಿಗೆ ಬಂದು ಸಂತೋಷದಿಂದ ಸಹಕರಿಸುತ್ತಿದ್ದರು. ಇವರ ನೆನಪು ಸದಾ ಮನದಲ್ಲಿ ಹಸಿರಾಗಿಯೇ ಉಳಿದಿದೆ.

ಮಾನ್ಯ ಶ್ರೀ ಪೆರ್ಲ ಕೃಷ್ಣಭಟ್ಟರು, ಶ್ರೀ ಎಸ್. ಈಶ್ವರ ಭಟ್ಟರು, ಶ್ರೀ ಎಸ್. ವಾಸುದೇವ ರಾವ್, ಶ್ರೀ ಬಿ. ಮಧುಕರ ಮಲ್ಯ, ಶ್ರೀ ಕೆ, ನಾರಾಯಣ ಶಾಸ್ತ್ರಿ, ಶ್ರೀಮತಿ ಶಾರದಾ ವಿ. ಭಟ್, ಶ್ರೀ ಎನ್. ಸಂಜೀವ ರೈ, ಶ್ರೀ ಡಿ, ಪಾಂಡುರಂಗ ಭಟ್ಟ, ಶ್ರೀ ಪಿ ವಿಷ್ಣು ಭಟ್ಟ, ಶ್ರೀ ಎ, ವಿಶ್ವನಾಥ, ಶ್ರೀ ಎನ್. ಮಹಾಬಲ ರೈ ಇವರೆಲ್ಲರ ಸಹಕಾರ, ಸಹಭಾಗಿತ್ವ, ಅನನ್ಯ, ಅವಿಸ್ಮರಣೀಯ. ಹಾಗೆಯೇ ಶ್ರೀ ಕೆ, ವೆಂಕಟಕೃಷ್ಣ ಭಟ್ಟ, ಶ್ರೀ ಕೆ. ತಾರಾನಾಥ ಶೆಟ್ಟಿ ಇವರ ಉಪಕಾರ ಎಂದೆಂದಿಗೂ ಮರೆಯುವಂತೆಯೇ ಇಲ್ಲ.

ಆತ್ಮೀಯರಾದ ಶ್ರೀ ನುಳಿಯಾಲು ರಘುನಾಥರೈಗಳು ಎಲ್ಲಾ ಧ್ವನಿ ಸುರುಳಿಗಳಲ್ಲಿ ಭಾಗವಹಿಸಿದ್ದಲ್ಲದೆ, ನನ್ನ ಎಲ್ಲಾ ಪ್ರಾಯೋಗಿಕವಾದ ಕಾರ್ಯಗಳಲ್ಲಿ ಸಕ್ರಿಯವಾಗಿ, ಹೋಗುವಾಗ ಬರುವಾಗ ನನ್ನ ಜೊತೆಯಲ್ಲೇ ಇದ್ದು, ಆರ್ಥಿಕವಾಗಿಯೂ ಸಹಾಯ ಮಾಡಿದ್ದಾರೆ. ನಾನು ಡಾಕ್ಟರೇಟ್ ಮಾಡುವಾಗಲೂ ಸಾಕಷ್ಟು ಸಹಕಾರವನ್ನು ನೀಡಿದ್ದಾರೆ. ಇವರ ಋಣಭಾರ ಹಾಗೆಯೇ ಉಳಿಯುತ್ತದೆ.

ಮುಖ್ಯವಾಗಿ ಇನ್ನೊಂದು ವಿಚಾರವನ್ನು ಉಲ್ಲೇಖಿಸಲೇಬೇಕಾಗಿದೆ. ಭಾಗವತರಿಗಾಗಲಿ, ಹಿಮ್ಮೇಳದವರಿಗಾಗಲಿ, ಮುಮ್ಮೇಳದವರಿಗಾಗಲಿ, ಯಾವುದೇ ರೀತಿಯ ಸಂಭಾವನೆಯನ್ನು ನಾನು ಕೊಡಲಿಲ್ಲ, ಯಾರೂ ಅಪೇಕ್ಷಿಸಲೂ ಇಲ್ಲ. ತಾವೇ ಕೈಯಿಂದ ದುಡ್ಡುಹಾಕಿ ಖರ್ಚುಮಾಡಿಕೊಂಡು ಬಂದಿದ್ದಾರೆ. ಇದು ಅವರ ಔದಾರ್ಯ, ಕಲಾಭಿಮಾನ, ಪ್ರಯೋಗಾಭಿಮಾನಕ್ಕೆ ಜೀವಂತ ಸಾಕ್ಷಿ. ಇಂಥವರಿಂದಲೇ ಭಾರತೀಯ ಸಂಸ್ಕೃತಿಯ ವೌಲ್ಯ ಇನ್ನೂ ಉಳಿದಿದೆ ಎಂದರೆ

ಅತಿಶಯೋಕ್ತಿಯಾಗಲಾರದು.

ಹೊಸ ಪ್ರಯೋಗವೆಂದೊಡನೆ ಕೆಲವರು ಮೂಗು ಮುರಿದುಕೊಳ್ಳುವುದು, ಆಕ್ಷೇಪಿಸುವುದು, ಸ್ವಾಭಾವಿಕ. ಅಂತಹ ಸಂದರ್ಭಗಳು ಬಂದಾಗಲೆಲ್ಲಾ ನನ್ನ ಬೆನ್ನುತಟ್ಟಿ ನಾನಿದ್ದೇನೆ, ಮುಂದರಿಸಿ ಎಂದು ಧೈರ್ಯ ಹೇಳಿ ಪ್ರೋತ್ಸಾಹಿಸಿದವರು ಮಾನ್ಯ ಶ್ರೀ ಪ್ರೊ. ವಿ. ಬಿ. ಅರ್ತಿಕಜೆಯವರು. ಪುಸ್ತಕಗಳ ಬಗ್ಗೆ ಧ್ವನಿಸುರುಳಿಗಳ ಬಗ್ಗೆ, ನನ್ನ ಬಗ್ಗೆಯೂ ಎಷ್ಟೆಷ್ಟೋ ಲೇಖನಗಳನ್ನು ಪತ್ರಿಕೆಗಳಲ್ಲಿ ಬರೆದಿದ್ದಾರೆ. ಉತ್ತೇಜನ ನೀಡಿದ್ದಾರೆ. ನಾನು ಡಾಕ್ಟರೇಟ್ ಮಾಡುತ್ತಿರುವಾಗಲೂ ಸಹಾಯ ಮಾಡಿದ್ದಾರೆ. ಅವ್ಯಾಜ ಪ್ರೀತಿಯಿಂದ ಸಲಹೆಸೂಚನೆಗಳನ್ನಿತ್ತಿದ್ದಾರೆ.

ಇನ್ನೊಬ್ಬರು ಆತ್ಮೀಯ ಮಿತ್ರ ಶ್ರೀ ಎಂ. ವಿ. ಭಟ್, ಮಧುರಂಗಾನ. ಇವರು ನನ್ನಲ್ಲಿಟ್ಟಿರುವ ಪ್ರೀತಿ ಅನ್ಯಾದೃಶ. ನನ್ನ ಬಗ್ಗೆ ಧ್ವನಿಸುರುಳಿಗಳ ಬಗ್ಗೆ, ಪುಸ್ತಕಗಳ ಬಗ್ಗೆ ಬರೆದಿದ್ದಾರೆ. ಪ್ರೋತ್ಸಾಹಿಸಿದ್ದಾರೆ. ಇವರ ಊಹಾಪೋಹಪಟುತ್ವ, ವ್ಯಕ್ತಿ ಚಿತ್ರಣ ನೈಪುಣ್ಯ ಮೆಚ್ಚಲೇಬೇಕಾಗಿದೆ. ಈ ಮಹನೀಯರಿಬ್ಬರೂ ನನಗೆ ಸ್ಮರಣೀಯರು. ಹಾಗೆಯೇ ಎಷ್ಟೋ ಜನ ಬರೆದಿದ್ದಾರೆ, ಪ್ರೋತ್ಸಾಹಿಸಿದ್ದಾರೆ, ಸಹಕರಿಸಿದ್ದಾರೆ, ಸನ್ಮಾನಿಸಿದ್ದಾರೆ, ಹೊಗಳಿದ್ದಾರೆ ಎಲ್ಲರಿಗೂ ನಾನು ಋಣಿಯಾಗಿದ್ದೇನೆ.

ಶ್ರೀ ನುಳಿಯಾಲು ಸಂಜೀವ ರೈಗಳು ನನ್ನ ಸಹೋದ್ಯೋಗೀ ಮಿತ್ರರು. ನಾವು ಸಹಕಲಾವಿದರೂ ಹೌದು. ಸಹಪಾಠಿಗಳೂ ಹೌದು. ನಮ್ಮೊಳಗಿನ ಅನ್ಯೋನ್ಯತೆ, ಸ್ನೇಹ ಅವಿಚ್ಛಿನ್ನವಾಗಿದೆ. ಇವರು ಹೇಳಿದ್ದಕ್ಕೆ ನಾನು ಒಪ್ಪಲೇಬೇಕು. ನಾನು ಹೇಳಿದ್ದಕ್ಕೆ ಅವರು ಒಪ್ಪದೆ ಇರಲಿಕ್ಕೂ ಆಗುವುದಿಲ್ಲ. ಇವರ ಉಸ್ತುವಾರಿಗೆ ನಾನು ನಮೋಸ್ತು" ಎನ್ನಲೇ ಬೇಕಾಗಿದೆ.

ಶ್ರೀ ನುಳಿಯಾಲು ಸತ್ಯನಾರಾಯಣ ರೈಗಳು ನನ್ನ ಶಿಷ್ಯರು. ಆದರೂ ನಾನವರಲ್ಲಿ "ಗುರುತ್ವ"ವನ್ನು ಕಾಣಲೇಬೇಕಾಗಿದೆ. ಇವರ ನಿಸ್ಪೃಹತೆಯ ಕಾರ್ಯಪಟುತ್ವವನ್ನು ಮೆಚ್ಚದಿರಲು ಹೇಗೆ ಸಾಧ್ಯ? ಇವರು ಜೊತೆಯಲ್ಲಿರುವುದು ನನ್ನ ಆತ್ಮ ಸ್ಥೈರ್ಯವನ್ನು ಹೆಚ್ಚಿಸಿದೆ. ಇವರಿಗೆ ಕೃತಜ್ಞತೆಗಳು.

ವಿದ್ವಜ್ಜನರು ಕೃತಿಗಳನ್ನು ಓದಿನೋಡಿ, ಮೆಚ್ಚಿಕೊಳ್ಳುವರೆಂಬ ವಿಶ್ವಾಸವಿದೆ.

ಇತಿ,

ಡಾ. ಡಿ. ಸದಾಶಿವ ಭಟ್ಟ.

ಪ್ರಸಂಗಗಳು

1. ಗಾಯತ್ರಿ
2. ಯಮ–ಯಮಿ
3. ಕಲಹಪ್ರಿಯನಾರದ
4. ದಕ್ಷಶಾಪ
5. ತಾರಾಶಶಾಂಕ
6. ವೇನವಧ
7. ಪೃಥುಚಕ್ರವರ್ತಿ
8. ಭರತದಿಗ್ವಿಜಯ
9. ಶ್ರೀಮತೀ ಸ್ವಯಂವರ
10. ವೀರವರ ಅಗಸ್ತ್ಯ
11. ಪರಶುರಾಮ ವಿಜಯ
12. ಶಿವ–ಚಂದ್ರ
13. ಲಕ್ಷ್ಮೀಶಾಪ
14. ಸೀತಾಜನನ
15. ಶಂಬರವಧೆ
16. ಸುಧನ್ವಾವಸಾನ
17. ವೇದವತೀಶಾಪ
18. ರಾವಣ ದಿಗ್ವಿಜಯ
19. ಊರ್ಮಿಳೆ
20. ಗುರುದಕ್ಷಿಣೆ
21. ಅಭಯ ಪ್ರದಾನ
22. ಸಾಲ್ವವಧ
23. ಸುದಕ್ಷಿಣ ವಧ
24. ದ್ರುಪದಗರ್ವಭಂಗ
25. ಶ್ವೇತಾವಸಾನ
26. ಸುಷೇಣವಧೆ
27. ಸೌಬಲ ವಧೆ
28. ಊರ್ವಶೀಶಾಪ
29. ಶತಧನ್ವವಧೆ
30. ಸಾಂಬವಿವಾಹ

ಊರ್ವಶೀ ಶಾಪ

ಪಾತ್ರಗಳು : 1. ಇಂದ್ರ 2. ಅಗ್ನಿ 3. ಯಮ 4. ದೂರ್ವಾಸ 5. ವಾಲ್ಮೀಕಿ 6. ರಾಜಹಂಸ 7. ಬ್ರಾಹ್ಮಣರು 8. ಗಂಗಮ್ಮ 9. ಕಾರ್ತಿಕೇಯ 10. ಕಂಜಾಕ್ಷ 11. ಕಂಜಾಕ್ಷಿ 12. ರಂಭೆ 13. ಊರ್ವಶಿ 14. ಗಾರುಡಿಗ 15. ವನಪಾಲರು 16. ಬೇತಾಳ 17. ಧೂಮಕೇತ 18. ಘೋರಜಠರ 19. ಗೂಢಚಾರರು

॥ ನಾಟಿ ರೂಪಕ ॥

ವಾರಣವದನ ವಿನಾಯಕ । ಬಾರಣೆಗತಿಹಿತ ಮೋದಕ ।
ಧಾರಿಣಿಜನಪರಿಪಾಲಕ । ಸಾರಿದೆ ತವಪದವ ॥ ೧ ॥

ಮತಿಯಂ ಕರುಣಿಸು ಗಣಪತಿ । ಅತಿಶಯದಿಂಕೊಡು ಶುಭತತಿ ।
ಹಿತದಿಂದುರಿತವ ಹರಿಸುತ । ಜತನದಿ ಪೊರೆ ಸುಕೃತಿ ॥ ೨ ॥

॥ ಸೌರಾಷ್ಟ್ರ । ತ್ರಿವುಡೆ ॥

ಸುರಪನೊಂದಿನ ನಾಕಸಭೆಯಲಿ । ಮೆರೆದಿರಲು ದಿಕ್ಪಾಲರೊಂದಿಗೆ ।
ಪರಮರೂಪಸಿ ಊರ್ವಶಿಯ ತಾ। ಕರೆಸಿ ಮುದದಿ ॥ ೧ ॥

ಕುಣಿಸಿ ತಾಮನದಣಿಯೆ ನೋಡುತ । ಮಣಿವಿರಾಜಿತ ಹಾರವನು ಸ ।
ದ್ಗುಣಿಯು ನೀಡಲಿಕವಳು ಹರ್ಷದಿ । ಮಣಿದು ತೆರಳೆ ॥ ೨ ॥

॥ ಭಾಮಿನಿ ॥

ವನಿತೆ ಊರ್ವಶಿ ಬೇಗ ಬರುತಿರೆ । ಅನಕ ತನ್ನಿದಿರಿಂದ ಬರುತಿಹ ।
ಮುನಿಪ ದೂರ್ವಾಸನನು ಗಮನಿಸದವಳು ದಾಟುತಿರೆ ॥
ಘನದಿ ಸೀರೆಯ ಸೆರಗು ಮುನಿಯಾ । ನನಕೆತಾಗಲು ಕೋಪದಿಂದಲಿ ।
ವನಿತೆ ನಿಲ್ಲೆನಲಾಕೆ ನಿಲ್ಲದೆ ಭರದಿ ತಾ ತೆರಳೆ ॥ ೧ ॥

॥ ಸೌರಾಷ್ಟ್ರ । ತ್ರಿವುಡೆ ॥

ಸರಸಿಜಾನನೆ ಊರ್ವಶಿಯೆ ನೀ । ನರಿತು ತನ್ನಯ ಮುಖಕೆ ಸೆರಗನು ।
ಒರಸಿ ತಿಳಿಯದ ತೆರದಿ ಪೋದೆಯ । ದುರುಳೆ ಕೇಳು ॥ ೧ ॥

ವಾರನಾರಿಯೆ ನಿನ್ನ ಮನದ ವಿಚಾರವರಿತೆನು ದೇವಲೋಕದ ।
ಭಾರಿನರ್ತನಗಾರ್ತಿಯೆನ್ನುವ । ಭೂರಿ ಮದದಿ ॥ ೨ ॥

ನೋಡಿ ಪಥದಲಿ ತನಗೆ ಕರಗಳ । ಜೋಡಿಸದೆ ಕಡೆಗಣಿಸಿ ತೆರಳಿದೆ ।
ಕೂಡಿರುವ ಮದವಿಳಿಸಿ ಬಿಡುವೆನು । ಗಾಢತನದಿ ॥ ೩ ॥
ಮಾನಹೀನೆಯೆ ಜವದಿ ನಿನಗಪ । ಮಾನವಾಗಲಿ ನರರ ಮೂಲಕ ।
ಹೀನ ಕರ್ಮದೊಳೆಂದು ಶಪಿಸುತ । ತಾನು ನಡೆದ ॥ ೪ ॥

॥ ವಾರ್ಧಕ ॥

ಭರದಿ ಮುನಿ ತೆರಳಲ್ಕೆ ಭರಿತ ಸನ್ಮೋದದಿಂ । ಗುರುದೀರ್ಘಸಾಧುವೊಲಿದಿತ್ತಿಂದುಹಾಸಮಂ ।
ಧರಿಸುತ್ತ ಪರಲೋಕಮಂ ಸಾರ್ದ ಮುನಿಪಂಗೆ ಸಂಸ್ಕಾರಮಂ ವಿರಚಿಸಿ ॥
ಮೆರೆವ ಪಿತಹಂಸಪಾದಸ ಪಾದಗಳ್ಗೆರಗಿ । ವರುಷ ಮೂರರ ತಿರೆಯ ಸಂಚಾರಕೆಂದು ತಾ ।
ಹರುಷದಲಿ ರಾಜಹಂಸನು ಬರುತ ವಾಲ್ಮೀಕಿಯೆಡೆಗೈದಿದಂವಹಿಲದಿ ॥ ೧ ॥

॥ ಕಾಂಭೋಜಿ । ಝಂಪೆ ॥

ಮುನಿಯು ಆ ವಾಲ್ಮೀಕಿ । ಘನತೋಷದಿಂದವನು । ಮನವಿರಿಸಿ ರಾಜಹಂಸನಿಗೆ ॥
ಜನನ ಮರಣವಿಚಾರ । ವನುಬಳಿಕ ವೇದಾಂತ । ಘನತತ್ತ್ವ ಬೋಧಿಸುತ ಹೀಗೆ ॥ ೧ ॥
ಕಳೆಯೆ ವತ್ಸರ ಮೂರು । ಕಲಿತ ತತ್ತ್ವರಹಸ್ಯ । ಬಳಿಕೊಂದು ದಿನ ತೋಷದಿಂದ ॥
ಬಳಿಗೈದಿ ವಾಲ್ಮೀಕಿ। ಯಲಿ ಪೇಳ್ದ ವಂದಿಸುತ । ಬಲುವಿನಯದಲಿ ಚಂದದಿಂದ ॥ ೨ ॥

॥ ನವರೋಜು । ಏಕತಾಳ ॥

ಗುರುವರನೇ ನೀ ಕೇಳು । ನಾ । ನೊರೆಯುವೆನ್ನೈ ಕರುಣಾಳು ॥
ಪರಮರಹಸ್ಯದ । ಪರತರತತ್ತ್ವವ । ಸರಸದಿ ಬೋಧಿಸ।ಲರಿತೆನು ಮುದದಲಿ ॥ ೧ ॥
ಚಂದದ ಈ ಜಗವೆಲ್ಲ । ನಿಜ । ವೆಂದರೆ ತಾ ಸರಿಯಲ್ಲ ॥
ಸಂದಿತು ಅವಧಿಯು । ಇಂದೆನಗೊರೆಯ್ಯೆ । ಮುಂದಿನ ದಾರಿಯ । ವಂದಿಪೆನೆನ್ನಲು ॥ ೨ ॥

॥ ಮಧ್ಯಮಾವತಿ । ಏಕತಾಳ ॥

ರಾಜಹಂಸನೆ ನಿನ್ನ ಮನದಾಲೋಚನೆಯ । ಮಾಜದರಿತೆ ತಾನು ಪೇಳುವೆ ನುಡಿಯ ।
ರಾಜಿಪ ಹಂಸಪಾದಾಖ್ಯನ ಮತವ । ತೇಜದಿ ನಡೆಸುನೀ ಸೇರುತ ಪುರವ ॥ ೧ ॥
ಮುದದಲಿ ರಾಜಸಿಂಹಾಸನವೇರಿ । ಸದಮಲ ಧರ್ಮವ ಜಗಕೆಲ್ಲ ಸಾರಿ ॥
ಬೆದರದೆ ರಿಪುವರ್ಗಗಳನೆಲ್ಲ ನೀಗಿ । ಉದಿತಾರ್ಥಜ್ಞಾನದಿ ಜನಕನಂತಾಗಿ ॥ ೨ ॥

॥ ಸೌರಾಷ್ಟ್ರ । ತ್ರಿವುಡೆ ॥

ತರಳ ನಡೆ ರಾಜ್ಯದಲಿ ಸಾವಿರ । ವರುಷ ಬಾಳಿರು ನಿನ್ನ ಪಿತರಿಗೆ ।
ಹರುಷವಾಗುವ ತೆರದಿ ನಡೆಯೆನೆ । ಒರೆದನಾಗ ॥ ೧ ॥

॥ ರಾಗತೋಡಿ । ಅಷ್ಟತಾಳ ॥

ಗುರುವೆಲಾಲಿಸು ರಾಜಯೋಗಿಯ ತೆರದಿ । ನೆರೆ ಬೋಧಿಸುತ್ತಲಿ ಮಾಡಿದೆ ಭರದಿ ॥
ತೆರಳಲು ಆದೇಶವಿತ್ತಿಹೆ ಮುದದಿ । ಚರಣಗಳಿಗೆ ಮಣಿಯುತ್ತಲುತ್ಸಹದಿ । ಪೋಗುವೆ ॥ ೨ ॥

ಹರಸುತ್ತ ಕಳುಹೆನೆ ಹರುಷದಿ ಮುನಿಪ । ನಿರತವುಕಾಯಲಿ ಹರಿ ನಿನ್ನ ಭುವಿಪ ॥
ಸರಿಯೆನೆ ಬರುತಿರೆ ಪಥದಲಿ ತಾಪ । ಭರಿತವಾಗಲು ಮುಂದೆ ಪುರವದು ಮಿರುಪ । ಕಾಣಲೂ ॥ ೨ ॥

॥ ಸಾಂಗತ್ಯ । ರೂಪಕ ॥

ತೋರುವ ಪುರವರ ಯಾರದೆನ್ನುತ ಹಂಸ । ಮೀರಿದ ಜವದಿ ಮುಂಬರಿಯೆ ॥
ಧಾರಿಣಿಸುರನೊಬ್ಬ ತಿರುಪೆಯನೆತ್ತುತ । ಭಾರಿ ಚಿಂತಿಸುತಾಗಲೊರೆಯೆ ॥ ೧ ॥

ಯಾರಿಗೊರೆಯುವುದಪಾರ ದುಃಖವನೀಗ । ಯಾರಿದ ಪರಿಹರಿಸುವರು ॥
ಯಾರೇನ ಮಾಡುವರಾರಿಂದಲೇನಿನ್ನು । ಪ್ರಾರಬ್ಧ ವಿಧಿ ಬೆನ್ನ ಬಿಡದು ॥ ೨ ॥

ಹಸಿವುತೃಷೆಗಳಿಂದ ಬಸವಳಿದಿಹೆ ಮುಂದೆ । ಉಸಿರೆಳೆಯುತ ಪೋಗಲಾರೆ ॥
ಎಸೆವ ಗಂಗಮ್ಮನ ಭೋಜನ ಗೃಹದಲ್ಲಿ । ಹಸಿವ ನೀಗುವೆ ಸಾಲತೋರೆ ॥ ೩ ॥

॥ ಭಾಮಿನಿ ॥

ಎನುತ ಬರುತಿರಲತ್ತ ಭೋಜನ । ಕೆನುತ ಬರುವವರನ್ನು ವಂಚಿಸು ।
ತನುದಿನದಿ ಗಂಗಮ್ಮ ಮೆರೆವಳು ಪುರದೊಳತಿಶಯದಿ ॥
ಘನದಿ ವಿಪ್ರನುಬಂದು ಭುಂಜಿಸಿ । ಹಣವ ಕೊಡುವೆನು ನಾಳೆಎನ್ನಲು ।
ಕಿನಿಸತಾಳುತ್ತವಳು ಕೊಡು ಕಾಸೆನ್ನಲವನೆಂದ ॥ ೧ ॥

॥ ನವರೋಜು । ಏಕತಾಳ ॥

ಗಂಗಮ್ಮಾ ನುಡಿಕೇಳು । ನೀ ॥ ಭಂಗಿಸಬೇಡದಯಾಳು ॥
ಮಂಗಳಮಹಿಮನ । ಕಂಗಳ ಕರುಣವು । ಹಿಂಗಿದೆತನ್ನೊಳು । ತಂಗಿಗೆ ನೀಸಮ ॥ ೧ ॥

॥ ಬೇಗಡೆ । ಅಷ್ಟತಾಳ ॥

ಭೂಸುರ ನುಡಿಗತಿ ಕೋಪವ ತಾಳಿ । ಕಾಸಿಲ್ಲದಿರಲೇಕೆ ತಿನುವಂಥ ಚಾಳಿ ।
ಲೇಸಿನಿಂ ಹಣವಿತ್ತು ನಡೆನೀದಿವಾಳಿ ॥ ಹೇಸಿಗೆ ಕೆಲಸವಿದೆನುತ ಗಯ್ಯಾಳಿ ॥ ೧ ॥

॥ ವಾರ್ಧಕ ॥

ಭರದಿ ಕೊನರುತಲಿಂತು ಕರದೊಳೆಳೆಯುತನಿಂದು । ತಿರುಪೆ ಚೀಲವನಾಂತು ಭರದಿ ಹೊಡೆಯಲಿಕಂದು ।
ಧರೆಯಮರ ಬೊಬ್ಬಿರಿಯೆ, ಧರಣಿಪಾಲಕಹಂಸ ಬಂದು ಕೇಳುತ ವಿಷಯವ ॥
ಅರಿತವಳಿಗಿತ್ತು ಹಣ ವಿಪ್ರನನು ಕಳುಹಿಸುತ । ವರಭೋಜನವ ಗೈದ ಮಹಿಳೆ ಮೋದದಿ ನೀಡೆ ।
ಧರೆಯಿದಾವುದು ರಾಜಯಾರಿದಕೆ ಪೊಸವಾರ್ತೆಯೇನೆಂದು ಕೇಳಲವಳ ॥ ೧ ॥

॥ ಬೇಗಡೆ । ಅಷ್ಟತಾಳ ॥

ಕಾಮಸಮೋಪಮ ಕಮನೀಯ ರೂಪ । ಕಾಮಿತದಾತನೈ ಕಾರ್ತಿಕ ಭೂಪ ॥
ಕಾಮನರಸಿಗಿಂತ ಸೊಬಗಿಂದ ಮಿರುಪ । ಕಾಮಿನಿಯಿಹಳವನಿಂಗತಿರೂಪ ॥ ೧ ॥

ಮಂಜುಳಗಾನೆ ಕಂಜಾಕ್ಷಿಯೆಂಬವಳು । ಸಂಜಾತೆಯಾಗಿಹಳತಿಸೊಬಗಿನೊಳು ॥
ರಂಜಿಪವಸುಧೆಪಾಲಕತನುಜರೊಳು । ನಂಜಬೀರುತ ಮದುವೆಯ ತೊರೆದಿಹಳು ॥ ೨ ॥

ಭಾಮಿನಿ

ಮಗಳ ಮನಸಿಗೆ ಸಲುವ ಸುವರನು । ಸಿಗದೆ ಸಕಲಾವನಿಯನರಸುತ ।
ದುಗುಡದಲಿ ಮನನೊಂದು ಶೋಕದೊಳಿಹನು ಧರಣಿಪನು ॥
ಸುಗುಣೆಯಿದು ಪೊಸವಿಷಯವೆನ್ನಲು । ನಗಧರನ ದಯೆಯಿಂದ ತೋಷದಿ ।
ಮುಗುದೆಯನು ವರಿಸುವೆನು ತಾನೆನುತಾಗ ತೆರಳಿದನು ॥ ೧ ॥

॥ ಸೌರಾಷ್ಟ್ರ । ತ್ರಿವುಡೆ ॥

ಇತ್ತಲಿಂತಿರಲತ್ತವ್ರಜಪುರ । ಪತ್ತನದಿವೈಭವದೊಳೊಂದಿನ ।
ಇತ್ತನೋಲಗ ಕಾರ್ತಿಕೇಯಮ । ಹತ್ತರದೊಳು ॥ ೧ ॥

ಚತುರಸಚಿವನ ಕರೆಯುತೆಂದನು । ಮತಿಯುತನೆ ಮುದದಿಂದಲೆಮ್ಮಯ ।
ಸತಿಸುತಾಪ್ತಸ ಹೋದರಾದ್ಯರು । ಹಿತದೊಳಿಹರು ॥ ೨ ॥

ಪುರದ ಜನತತಿ ಧರ್ಮಮಾರ್ಗದೊ । ಳಿರುವುದೆಮ್ಮಯ ಭಾಗ್ಯವಲ್ಲವೆ ।
ಅರಿಗಳುಪಟಳವಿಲ್ಲ ನೆಮ್ಮದಿ । ತಿರೆಯೊಳಿಹುದು ॥ ೩ ॥

ಮಾಧವನ ಕರುಣೆಯೊಳು ನಮಗೆಣೆ । ಯಾದವರನಾ ಕಾಣೆ ದಿಟದಿಂ ।
ಆದರೊಂದೀ ಕೊರತೆ ತನ್ನನು । ಬಾಧಿಸುವುದು ॥ ೪ ॥

ಭಾಮಿನಿ

ಯಾರೊಳೆನ್ನಲಿ ಸುತೆಗೆ ಸರಿಹದಿ । ನಾರು ತುಂಬಿತು ರೂಪವಂತ ಕು ।
ಮಾರರನು ತೋರಿಸಲು ತೆಗಳುತ ವರಿಸೆನೆನ್ನುವಳು ॥
ದಾರಿ ಕಾಣೆನು ಪುರುಷನಾವನೋ । ನೀರೆಯೊಪ್ಪುವ ಎನಲು ಜನಪ ಕು ।
ಮಾರ ಬರೆ ಮನ್ನಿಸುತ ಬಂದಿಹುದೇಕೆ ಪೇಳೆನಲು ॥ ೧ ॥

॥ ಸುರುಟಿ । ಏಕತಾಳ ॥

ಲಾಲಿಸುಜನಪಾಲ । ಸದ್ಗುಣ । ಮಾಲ ಮಹಿಮಲೋಲ ॥
ಮಾಳವ ದೇಶವ । ನಾಳುವ ಪಾರ್ಥಿವ । ಮೌಳಿಯೆ ಜನಕನು । ಪೇಳುವೆ ನಿನಗಂ ॥ ೧ ॥

ಗುರುವಿತ್ತಾಜ್ಞೆಯನು । ಧರಿಸುತ । ಚರಿಸಿದೆ ಭೂಮಿಯನು ॥
ವರವಾಲ್ಮೀಕಿಯು । ಕರುಣೆಯನಿರಿಸುತ । ಪರತರ ತತ್ತ್ವವ । ಅರಿತೆನು ಬೋಧಿಸೆ ॥ ೨ ॥

ತಪಸಿಯಸುತನಲ್ಲ । ಭೂಪತಿ । ಗುಪಿತದ ವೇಷವಲ ॥
ವಿಪುಲ ಗುಣಾಢ್ಯನೆ । ಚಪಲತೆಯಿಲ್ಲದ । ಸಫಲಸುಜೀವನ । ಕೃಪೆಯಲಿ ಕಳುಹಿಸೆ ॥ ೩ ॥

॥ ಸೌರಾಷ್ಟ್ರ । ತ್ರಿವುಡೆ ॥

ತೆರಳುವೆನು ನಾಮುಂದಕೆನ್ನಲು । ಧರಣಿಪತಿ ತಾನೆಂದ ಕುವರನೆ ।
ಇರುವುದರಮನೆಯಲ್ಲಿ ಕೆಲದಿನ । ಹರುಷದಿಂದ ॥ ೧ ॥

॥ ಭಾಮಿನಿ ॥

ಎನಲಿಕೊಪ್ಪಲು ರಾಜ ಹಂಸನು । ತನಯೆಗಿವ ರೂಪಿನಲಿ ಜೊತೆಯಹ ।
ನೆನುತ ಯೋಚಿಸಿ ಹರುಷದಿಂದಲಿ ನಡೆದನರಮನೆಗೆ ॥
ದಿನವೆರಡು ಕಳೆಯಲ್ಕೆ ರಾಜನು । ಜನಪ ಹಂಸನ ಚಿತ್ರ ಬರೆಸುತ ।
ತನಯೆ ನಳಿನಾಂಬಕಿಗೆ ಕಳುಹಲು ನೋಡಿ ಮನದೊಳಗೆ ॥ ೧ ॥

॥ ವಾರ್ಧಕ ॥

ಅಂಗಭಾವವ ನೋಡಲಂಗಜಂಪುರುಷರೊಳು । ಪುಂಗವಂ ವಲ್ಕಲಾಲಿಂಗಿತಂ ಶಿರದೊಳುರೆ ।
ಗಂಗೆಯಂ ಹೊತ್ತವನ ಭಂಗಿಪಂ ತುಂಗಟೆಯಂಗವಣೆ ಶೃಂಗಾರದಿ ॥
ತಂಗದಿರನಂತಿರುವ ಸಿರಿಮೊಗಂಭಾವದೊಳು । ಭೃಂಗಾಲಕಿಯ ಅಂತರಂಗದೊಳಪಾಂಗದೊಳು ।
ತಂಗುವಂ ಮಂಗಳಂ ಸಂಗಿಯೆನಗಾಗೆನಾ ಧನ್ಯೆಯೆಂದಾನಂದದಿ ॥ ೧ ॥

ಕಂದ

ವಿಧುಮುಖಿಯಿಂತೆನುತಾಗಲು । ಚದುರನ ಸುವಿಚಾರವನರಿವಾತುರದೊಳಗಂ ॥
ಮದಗಜಗಾಮಿನಿ ಬಂದು ನು । ಡಿದಳಾಕೆಯುಪಿತನೊಳು ಸರಸದಿ ತಾಬೇಗಂ ॥ ೧ ॥

॥ ನೀಲಾಂಬರಿ ॥ ತ್ರಿವುಡೆ ॥

ತಾತನೆ ಕೇಳುಮಾತ । ಪ್ರೀತಿಯೊಳೆನ್ನ । ತಾತನೆ ಕೇಳುಮಾತ ॥
ತಾತನೆ ತಪಸಿಯ ಚಿತ್ರವ ನನಗೆ ನೀ । ನೇತಕೆ ಕಳುಹಿಸಿದೆ । ಸಂಭ್ರಾಂತೆಯಾದೆ ॥
ತಾತನಿತ್ತಿಹೆಯೇಕೆ ಚಿತ್ರವ । ನಾತಪೋಧನವರಸುಪುತ್ರನ ।
ಕಾತರದಿ ಬಂದರುಹಿದರೆ ಕೋ । ಪಾತಿರೇಕದಿ ಜರೆಯ ಬೇಡವು ॥ ೧ ॥

ಧವಳಾಂಗನೀತನಾರ್ಯೆ । ಭೂವಲಯದಿ । ಭುವಿಯಾಣ್ಮಜಾತನೇನ್ಯೆ ॥
ವಿವರನಾವೆಲ್ಲವ ಕೇಳುವೆನವನೀಶ । ಇವಗೇಕೆ ಕಾವಿಜಡೆ ।
ನೀವಿವರನೀಡೆ । ವಿವರನಾನೆಲ್ಲವ ಕೇಳುವೆ । ನವನಿಪ । ತಿಗಿನ್ನೇಕೆ ಜಟೆ ಪೇ ।
ಳಿವಗೆ ವಸನಗಳೇನು ನಾರಿನ । ತವಸಿಯೇ ನನುಮಾನವೆಲ್ಲವು ॥ ೨ ॥

ವರಿಸುವೆ ನಾನಿವನ । ಸೋತಿದೆಮನ । ಹರಿಸಿಸಂಶೀತಿ ಘನ ।
ವರಮನವನೆಲ್ಲವನು ಕದಡಿಹ । ಭರದೊಳಿಹುದುಮನ । ಪೊರೆ ತನ್ನನು ಜತನ ॥
ವರಮನವನೆಲ್ಲವನು ಕದಡಿಹ । ತರಳನಿವವಲ್ಲಭನು ಕೇಳೆಂ ।
ದರಸನನು ಕಾಣುತ್ತ ಪೇಳಲು । ತರಳೆಗೆಂದನು ವಿಷಯವೆಲ್ಲವ ॥ ೩ ॥

॥ ಸಾಂಗತ್ಯ । ರೂಪಕ ॥

ತರಳೆಯ ನುಡಿಗೆಂದ ತೋಷದಿ ಧರಣಿಪ । ಪರಮಶೌರ್ಯಾನ್ವಿತನು ।
ದೊರೆಹಂಸಪಾದನ ಸುತರಾಜಹಂಸನು । ತಿರೆಯ ಸಂಚರಿಸುತ್ತಲಿವನು ॥ ೧ ॥

ಯತಿಗಳ ಸೇವೆಯ ನೆಸಗುತ್ತ ಲನುದಿನ । ಹಿತದಿಂದ ಸಕಲವಿದ್ಯೆಗಳ ॥
ಅತಿಶಯದಲಿಕಲಿತಿಲ್ಲಿಗೆ ಬಂದಿಹ । ಅತಿರೂಪವಂತನು ಬಾಳ ॥ ೨ ॥

॥ ಕೇದಾರಗೌಳ । ಝಂಪೆ ॥

ಬಾಲೆಯಾ ಕುವರನನ್ನು । ವರಿಸುತಲಿ । ಶೀಲದಿಂಬಾಳಲಿನ್ನು ॥
ಕಾಲವಿದು ಯೋಗ್ಯವೆನಲು । ಸರಿಯೆನುತ । ಆಲತಾಂಗಿಯುಪೋಗಲು ॥ ೧ ॥

ಕರೆಸಿದನು ಜೋಯಿಸರನು । ಜಾತಕವ । ಹರುಷದಿಂತೋರಿಸಿದನು ॥
ಕೊರತೆಗಳು ಇಲ್ಲ ನೀನು । ನಾಳೆಯೇ । ವಿರಚಿಸೈ ಮದುವೆಯನ್ನು ॥

ಎಂದರುಹೆಗಣಕರನ್ನು । ಕಳುಹಿಸುತ । ಬಂಧುಗಳನೆಲ್ಲರನ್ನು ।
ಮುಂದಾಗಿ ಬರಿಸಿನೃಪನು । ಮದುವೆಯನು । ಚಂದದಲಿ ಮಾಡಲವನು ॥ ೩ ॥

॥ ಭಾಮಿನಿ ॥

ಜನಪ ಕೇಳೈ ಬಳಿಕ ಮದುವೆಯ । ಘನತರದ ವಾರ್ತೆಯನು ಕೇಳುತ ।
ಜನರು ಪೋಗುವ ಸಂಭ್ರಮವನೇನೆಂದು ಬಣ್ಣಿಸಲಿ ॥
ದಿನಪ ಮೂಡಲಿಕಂದು ಜನಪತಿ । ವನಜನಯನೆಯ ರಾಜಹಂಸಗೆ ।
ಅನಲಸಾಕ್ಷಿಯೊಳಿತ್ತು ತಾನಿರೆ ಭೂರಿತೋಷದಲಿ ॥ ೧ ॥

॥ ವಾರ್ಧಕ ॥

ಫಲುಗುಣನೆಲಾಲಿಸೈ ಮುಂಗಥೆಯ ಪೇಳುವೆನು । ಕಳೆಯಲಾ ಪರಿಣಯವು ರಾಜಹಂಸನು ಬಳಿಕ ।
ಸಲಿಲಾಂಬಕಿಯ ಕೂಡೆ ಸಂತೋಷದಿಂದಿರಲು ನೃಪತನಯಕಂಜಾಕ್ಷನು ॥
ಪೊಳಲ ಹೊರಗಿರುವ ವರ ಉದ್ಯಾನವನದಲ್ಲಿ । ಬೆಳಗುತಿಹ ಚಂದ್ರಿಕೆಯೊಳೊಂದಿರುಳು ಚಂದದೊಳು ।
ಸುಳಿಸುಳಿದು ವಿಹರಿಸುತಲಿರುಳರಸನನು ನೋಡಿ ಪೊಗಳಿದನು ಸಂಭ್ರಮದಲೀ ॥ ೧ ॥

॥ ಶಂಕರಾಭರಣ । ಅಷ್ಟತಾಳ ॥

ರಾಜಿಪ । ಚಂದ್ರ ಸುಂದರ ಕಿರಣನು । ರಾಜಿಪ ॥ ಪ ॥
ರಾಜಿಪ ಶರದಿಂದುವದನ । ನಿಶಿ । ಮಾಜಿಪ ಕರದಿಂದ ಗಗನ । ಆಹ ।
ತೇಜದಿ ಶೋಭಿಪ ರಾಜಿತಾಮಲಮಹ । ದ್ರಾಜಗೆ ಕುಮುದವಿರಾಜಿ ರಾಗಿಣಿ ನಿಜ ॥ ಅ. ಪ ॥
ಚಂದ್ರಿಕೆ ಪಸರಲು ಭುವನ । ಚೆಲ್ವ । ಕುಂದಕುಟ್ಮಲದಿಂದ ಸುವನ । ಕಳೆ ।
ಯಿಂದಲೀ ಬೆಳಗಿತೀಭುವನ । ಶರ । ಸಂಧಿಸುತಿರುವನು ಮದನ । ಸರಿ । ಮಂದ
ಮಾರುತಬೀಸುತಂದದಿ । ಮನವ ಬೇ । ಕೆಂದು ಮೋಹಿಪಖರೆ ಚಂದಿರಗೆಣೆಯಿಲ್ಲ ॥ ೧ ॥

॥ ಕೇದಾರಗೌಳ । ಅಷ್ಟ ॥

ಅರಸುಗುವರನಿಂತು । ಸರಸದಿ ಮುದವಾಂತು । ಸರಿದು ಪವಡಿಸಲಂದು ॥
ವರುಣನ ಸಭೆಗೆಂದು । ಹೊರಟಾ ವನಕೆ ಅಂದು । ಹರುಷದಿಂದಾಗ ಬಂದು ॥ ೧ ॥

ರಂಭೆ ಊರ್ವಶಿಯರು । ತುಂಬು ಜವ್ವನೆಯರು । ಸಂಭ್ರಮದಿಂದ ಮುಂದು ॥
ಕುಂಭಿನೀಪತಿಜನ । ಮುಂಬರಿಯುತ ನೋಡಿ । ರಂಭೆ ನುಡಿದಳು ನಿಂದು ॥ ೨ ॥

ತಂಗಿನೋಡೆಲೆ ನೀನು । ಅಂಗಜನಂತಿಹ । ಶೃಂಗಾರಲೋಲನನು ॥
ತುಂಗಭುಜಾನ್ವಿತ । ಅಂಬುಜಸಖತೇಜ । ಮಂಗಳ ಮಹಿಮನನು ॥ ೩ ॥

॥ ಶಂಕರಾಭರಣ । ಮಟ್ಟೆ ॥

ಏನೆರಂಭೆ ಹೀನರಾದ । ಮಾನವರನು ಪೊಗಳಬೇಕೆ ।
ತ್ರಾಣವಿಲ್ಲ ಜನನ ಮರಣ । ಕಾಣುವವರನು ॥
ಸಾನುರಾಗದಿಂದ ನೋಡು । ಜ್ಞಾನಿ ರೂಪವಂತ ನೀತ ।
ಹೀನನೆಂದು ಜರೆಯಬೇಡ । ಮಾನಿಸಿವನನು ॥ ೧ ॥

ಮತ್ತೆ ಮತ್ತೆ ಒಂದೆ ಹಾಡು । ಮತ್ತಳಾಗಿ ನುಡಿವೆ ನೋಡು ।
ಚಿತ್ತವಿರಲಿಕಿವನ ಕೂಡು । ಉತ್ತಮಾಂಗನು ॥
ಬಿತ್ತರಿಸಲು ಸತ್ಯವಿಷಯ । ಹೊತ್ತಿಸುವೆಯಸೂಯೆ ಕಲುಷ ।
ಚಿತ್ತಜಾತನಂತೆ ರೂಪ । ವೆತ್ತು ಮೆರೆವನು ॥ ೨ ॥

ಆಯಿತಾಯಿತಿವನ ಪೊಗಳಿ । ಹೋಯಿತೀಗ ಸಮಯ ಹೊರಳಿ ।
ರಾಯವರುಣನೆಮಗೆ ಶಾಪ । ವೀಯ ದುಳಿವನೆ ॥
ಕಾಯುವವರು ಯಾರುನಮ್ಮ । ಆಯುಮುಗಿದು ಹೋಯಿತಿವನ ।
ವಾಯು ಮಾರ್ಗಬಿಟ್ಟುಬಂತ । ಪಾಯ ಘಮ್ಮನೆ ॥ ೩ ॥

ವಾರನಾರಿಯಿಂತು ಪೇಳಿ । ಘೋರನಾಗ ವಿಷದ ಗಾಳಿ ।
ದೂರದಿಂದ ಬಿಸಿ ತೆರಳೆ । ಭೂರಮೇಶನು ॥
ಧಾರಿಣಿಯಲಿ ಬೀಳಲುರುಳಿ । ಚಾರುವನದ ಪಾರುಪತ್ಯ ।
ಗಾರರಾದ ಚಾರರಾಗ । ಸಾರಿಬರುತಿರೆ ॥ ೪ ॥

॥ ಸೌರಾಷ್ಟ್ರ । ತ್ರಿವುಡೆ ॥

ಕುಸುಮವನ ಪಾಲಕರು ಬೇಗನೆ । ವಸುಮತೀಶಗೆ ತನಯ ಮಡಿದಿಹ ।
ವಿಷಯ ತಿಳಿಸಲು ಬಂದು ನೋಡುತ । ವ್ಯಸನದಲ್ಲಿ ॥ ೧ ॥

॥ ಭಾಮಿನಿ ॥

ಪ್ರೇತ ಭೂತದ ಬಾಧೆಯೇ ವಿಷ । ವಾತ ರೋಗದ ದೋಷವೇ ಶಿವ ।
ಯಾತರಿಂದಾಯ್ತೆನುತ ಸಂಶಯದಿಂದ ಚಿಂತಿಸುತ ॥
ಕಾತರದಿ ಮಾಂತ್ರಿಕನ ಕರೆಸಲು । ಸಾತಿಶಯದಿಂದವನು ಮಂತ್ರಿಸೆ ।
ಜಾತನೇಳದಿರಲ್ಕೆ ದುಃಖದಿ ಭೂಪ ಹೊರಳಿದನು ॥ ೧ ॥

॥ ನೀಲಾಂಬರಿ । ರೂಪಕ ॥

ಕಂಜನಯನಸುತ ಹಾಗುಣ । ರಂಜಿತ ಬಾರ್ಯೆ ಶಿವಶಿವ ।

ಭುಂಜಿಸಿ ಪೋದನೆ ಕಾಲನು । ಅಂಜದೆ ನಿನಗಿಂದು ॥
ಮಂಜುಳಭಾಷಿಯೆಸುತನೇ । ಸಂಜನಿಸಿತೆ ನಿನಗೀಗತಿ ।
ಕುಂಜರ ವರದನ ಮುನಿಸೇಪ್ರ । ಭಂಜನ ಬಲನೆಂದು ॥ ೧ ॥

ಏನೀ ಮರಣವಕಾಲದಿ । ಸೂನುವೆ ಭವಿಸಲು ಕಾರಣ ।
ಹಾನಿಯನೆಸಗಿದರಾರನು । ಮಾನಿಸದರುಹಿಂದು ॥
ನಾನಿರೆ ನಿನ್ನ ವಿಯೋಗದಿ । ಮಾನಿಪರಿಲ್ಲೆನಗಿಂದೆನೆ ।
ಮಾನವ ಬಾಲಕ ಹಂಸನಿ । ಧಾನದಿ ತಾ ಬಂದು ॥ ೨ ॥

॥ ಬೇಗಡೆ । ಏಕತಾಳ ॥

ಭರದಿಕೇಳ್ ಮನ । ವಿರಿಸಿರಾಜೇಂದ್ರ । ಕೊರಗುವುದು ಬರಿದೇ ।
ಕರಿಯದವನೇ । ಭರಿತಗುಣಸಾಂದ್ರ ॥
ಧರಣಿಯಲಿ ಜಾತರಿಗೆ ಜನನವು । ಮರಣ ಶಾಶ್ವತ । ಅರಿದು ಮೀರಲು ।
ಮರುಗಿ ಫಲವೇ । ನಿರದು ವಿಧಿಲಿಪಿ ।
ದೊರೆಯೆ ಯೋಚಿಸು । ತರಳ ಬಾರನು ॥ ೧ ॥

॥ ವಾರ್ಧಕ ॥

ಅತ್ತರೇನಿಹುದು ಫಲ ಬಿಡು ಶೋಕವೆನಲು ತಲೆ(ಯೆತ್ತಿ ಕಾರ್ತಿಕ ಭೂಪರಾಜಹಂಸನೊಳೆಂದ ।
ಸತ್ತವರ ಸಂಸ್ಕಾರವನು ಗೈವ ಯೋಗವೆನಗಿಲ್ಲವೈನೀನು ಕೇಳು ॥
ಸತ್ತವರ ಹೆಣತಿನುವ ಬೇತಾಳನೆಂಬವನು । ಪತ್ತನದ ಹೊರಗಿರುವ ಕಾಡಿನಲ್ಲಿಹ ನವಗೆ ।
ಇತ್ತು ಕೈ ಮುಗಿಯದಿರಲಾಪತ್ತು ನಮಗೆನಲು ಭಯವೇಕೆ ಧೈರ್ಯತಾಳು ॥

॥ ಮಾರವಿ ಏಕತಾಳ ॥

ಬಿಡುಬಿಡು ಭೂಮಿಪ । ಬಡಬೇತಾಳನು । ಸುಡುಗಾಡಿನೊಳೆನ್ನ ।
ತಡೆದರೆ ನಿಮಿಷದಿ । ಬಡಿದುರುಳಿಸುವೆನು । ತಡಮಾಡದೆ ನಿನ್ನ ॥ ೧ ॥

ತರಳನ ಕಳುಹಿಸು । ತೆರಳುವೆ ಜೊತೆಯಲಿ । ಇರುವುದು ಹರಿದಯೆಯು ॥
ವರಬಲತನಗಿದೆ । ತೊರೆ ನೀ ಭಯವನು । ತರಳನಶವ ಕಳುಹು ॥ ೨ ॥

॥ ಭಾಮಿನಿ ॥

ಎನುತ ವೀರಾವೇಶದಿಂದಲಿ । ಜನಪ ಹಂಸನು ನುಡಿಯೆ ಮೆಚ್ಚುತ ।
ವಿನುತಮನ್ನಣೆಯಿಂದ ಕಳುಹಿದ ಸುತನ ಶವವನ್ನು ॥

ಘನದಿ ಹಂಸನು ಮಸಣದಲಿತಾ । ಮನವಿರಿಸಿ ಕಾಯುತ್ತ ಕುಳಿತಿರೆ ।
ವನದೊಳತ್ತಕರಾಳನಹ ಬೇತಾಳ ನಿಶಿಯೊಳಗೆ ॥ ೧ ॥

॥ ಭೈರವಿ । ಝಂಪೆ ॥

ಬಳಗವನು ಕರೆಸುತ್ತ । ತೊಳಗುತಿಹ ವಿಷ್ವರದಿ ।
ಕುಳಿತು ವೈಭವದಿಂದ । ಖಳನುಡಿದ ಜವದಿ ॥ ೧ ॥

ಮಾತ ಕೇಳೆಲೊಧೂಮ । ಕೇತ ವಿಕ್ರಮ ಭೀಮ ।
ಭೀತಿಯಲಿ ಭುವಿಯ ಜನ । ವೋತು ನಡೆಯುವರೆ ॥ ೨ ॥

ಅರುಹು ಗಾಂಧಾರಪತಿ । ಅರಿತು ನಡೆವನೆ ಎಮಗೆ ।
ಮರೆತಿಹನೆ ಪದ್ಧತಿಯ । ಭರದಿ ಎನೆಕೇತ ॥ ೩ ॥

ಪುಣ್ಯಮೂರುತಿ ಕೇಳು । ಪುಣ್ಯದಿಂದಲಿ ಭಾಗ್ಯ ।
ಪೂರ್ಣರಾಗಿಹೆವು ಮು । ಕ್ಕಣ್ಣ ನೊಲುಮೆಯಲಿ ॥ ೪ ॥

ಸತ್ತ್ವ ಸಾಹಸದಿನ ।ಮತ್ತ ನೋಳ್ಪವರಿಲ್ಲ ।
ಸತ್ತವರ ಹೆಣ ನಮಗೆ । ಇತ್ತು ಬಾಳುವರು ॥ ೫ ॥

ಭೂಮಿಯಲಿ ನಿನಗಿಂತ । ಭೀಮಬಲರಿಲ್ಲವೆನೆ ।
ನೇಮಿಸಿದ ಗೂಢಚರ । ಸ್ತೋಮವನು ಕರೆಯೆ ॥ ೬ ॥

ಓಡಿಬಂದೆರಗುತಿರೆ । ನಾಡಿನೊಳು ತಿರುಗುತ್ತ ।
ನೋಡಿದುದ ಪೇಳಿರೆನೆ । ಗಾಢದಿಂದವರು ॥ ೭ ॥

॥ ಸಾರಂಗ । ಅಷ್ಟತಾಳ ॥

ನಾಕಂಡೆ ನಾ ಕಂಡೆನು । ನಮ್ಮೊಡೆಯಾನೆ । ನಾಕಂಡೆ ನಾಕಂಡೆನು ॥
ಹೂದೋಟದಲ್ಲಿರಲು । ಕಂಜಾಕ್ಷನು । ಮೋದದಿ ಮಲಗಿರಲು ॥
ಆ ದಾರಿಯಲಿ ಬಂದು । ಕ್ರೋಧದೊಳೂರ್ವಶಿ । ಬಾಧಿಸಿ ಕೊಲ್ಲಲು । ಮೇದಿನಿಪತಿ ಮತ್ತೆ ॥ ೧ ॥
ಸುಡುಗಾಡಿಗೊಯ್ದು ಶವ । ಕಾಯುವನಲ್ಲಿ । ಹುಡುಗನೊಬ್ಬನು ದೇವ ॥
ಪೊಡವಿಪನಿಯಮವ ।ಕಡೆಗಣಿಸಿರುವನು । ದಡಿಗನ ಶಿಕ್ಷಿಸಿ । ಬಿಡದಿರೆ ಕಷ್ಟವು ॥ ೨ ॥

॥ ಸೌರಾಷ್ಟ್ರ । ತ್ರಿವುಡೆ ॥

ಚರರ ನುಡಿಯನು ಕೇಳಿ ಕೋಪದೊ । ।ಉರಿ ಮಸಗಿ ಬೇತಾಳನೆಂದನು ।
ಧರಣಿ ಪಾಲನಿಗೇನು ಧೈರ್ಯವು ।ಅರರೆ ಚೋದ್ಯ ॥ ೧ ॥

ಪೂರ್ವಪದ್ಧತಿ ಮುರಿದನೇತಕೆ । ಸಾರ್ವಭೌಮನು ಗರ್ವದಿಂದಲಿ ।
ಸಾವ ಬಯಸಿಹ ಸುತನ ಜೊತೆಯಲಿ । ಕಾವರಾರು ॥ ೨ ॥

ಘೋರಜಠರನೆ ಸೆಳೆದು ತನ್ನಿರಿ । ಭೂರಿ ಮದದಲಿ ಕಾವಲಾಗಿಹ ।
ಪೋರನನು ಹೆಣ ಸಹಿತ ಬಣಗನ । ಗಾರುಗೆಡಿಸಿ ॥ ೩ ॥

ನುಡಿಯ ಕೇಳುತ ಕೇತ ಜಠರರು । ಪಿಡಿದು ತಹವೀಕ್ಷಣದಿ ದುರುಳನ ।
ಕಡಿದು ನೀ ಕೆಡಹೆಂದು ನಮಿಸುತ । ನಡೆದರಂದು ॥ ೪ ॥

ಧಡಿಗರುರೆ ತೋಷದಲಿ ಕುಣಿಯುತ । ಪೊಡವಿಪಾಲನು ಕಾಯುತಿರುವಾ ।
ಕಡೆಯೊಳೈದುತ ಕೋಪದಿಂದಲಿ । ನುಡಿದರಾಗ ॥ ೫ ॥

॥ ಕಮಾಚು । ಅಷ್ಟತಾಳ ॥

ಯಾರೆಲೊ ಪೋರ ನೀ ನಿಂತು । ಕೆಲ । ಸಾರು ಕಾಯುವದೇಕೆ ಭ್ರಾಂತು ।
ಗ್ರಹ । ಚಾರ ಸುತ್ತಿದೆ ನಿನಗಿಂತು ॥
ಮಹಾಶೂರ ತಾನೆಂದ ಹಂಕಾರದಿ ಬರಿದೆ ವಿ । ಚಾರವಿಲ್ಲದೆ ದುಷ್ಟ । ಪಾರುಪತ್ಯವು ಕಷ್ಟ ॥ ೧ ॥

ತಿಳಿದು ಬೇತಾಳನ ಬಲವ । ನಮ್ಮ । ಬಲುಮೆಯ ಕಾಣುತ ಛಲವ । ಬಿಟ್ಟು ।
ತೊಲಗದೆ ಬಿಡಲೇಕೆ ಜೀವ । ನಾವು । ಮುಳಿದರೆ ಪೊರೆಯುವರಾರು ಮೂರ್ಲೋಕದಿ ।
ಸುಲಭವಲ್ಲವು ಕಮಲಾಕ್ಷನ ರಕ್ಷಣೆ ॥ ೨ ॥

ಭಳಿರೆ ಕಾಡಾಡಿಯ ಕುವರ । ಸುರ । ಬಲವೆಮಗಿದಿರಿಲ್ಲ ತೋರ । ಕತ್ತ ।
ನಿಳಿಸಿ ನೋಡುವದೇನು ಶೂರ । ನಿನ್ನ । ಕೊಲುವೆವು ಕೊಡದಿರೆ ಮಡಿದಿಹ
ಹುಡುಗನ । ನಿಲುವೆಯ ಕಡಿದಾಡೆ ಕಡೆಗೇನು ಮಾಡುವೆ ॥ ೩ ॥

॥ ಕಂದ ॥

ಎಲವೆಲವೊ ಕುಣಪ ಭಕ್ಷಕ । ಬಳಿಗೈದದೆ ದೂರನಿಂತು ಬೊಗಳಿರಿಯೆನ್ನೊಳ್ ॥
ಕಲಹಕೆ ಬಂದರೆ ಖಡ್ಗದಿ । ಬಲಿಯಿಕ್ಕುವೆ ನಿಮ್ಮನೆಲ್ಲರಂ ಭೂತಳದೊಳ್ ॥ ೧ ॥

॥ ಭೈರವಿ । ಅಷ್ಟತಾಳ ॥

ಮಾನವ ಪಿಸುಣ ನೀನು । ಕಾಳಗದಲ್ಲಿ । ಪ್ರಾಣವ ಕಳೆವುದಿನ್ನು ॥
ಸಾನುರಾಗದಿ ರಾಜ । ಸೂನುವನೆಮಗಿತ್ತು । ಕಾನನದೆಡೆ ಸಾರೆಲೊ ॥ ೧ ॥

ದುಷ್ಟರೆ ಗರ್ವವೆಷ್ಟು । ಸಾಯುವಿರೀಗ । ಪೆಟ್ಟನು ತಿಂದುಕೆಟ್ಟು ॥
ದಿಟ್ಟಿಪೆ ನೀಕ್ಷಣ । ದಿಟ್ಟತನವನೆಂದು । ಬಿಟ್ಟನೊಂದಸ್ತ್ರವನು ॥ ೨ ॥

ಅಯ್ಯಯ್ಯೊ ಕೆಟ್ಟೆವೆಂದು । ಧಾವಿಸುತಾಗ । ಅಯ್ಯಗೆ ಪೇಳಲಂದು ॥
ಒಯ್ಯನೆ ಸರಿಯುತ । ಮಯ್ಯುರಿ ಸಹಿಸದೆ । ಬಯ್ಯುತ ನುಡಿದರಂದು ॥ ೩ ॥

॥ ಸಾರಂಗ । ಅಷ್ಟತಾಳ ॥

ಲಾಲಿಸು ವನಪ ಮಾತ । ನಿನ್ನವರನ್ನು । ಪಾಲಿಸಿ ಮೆರೆಯೊಖ್ಯಾತ ॥
ಶೀಲನಿನ್ನಾಜ್ಞೆಯಲಿ । ಕಾಯುತಲಿಹ । ಬಾಲನ ಶೌರ್ಯದಲಿ ॥
ಕಾಳಗ ಕಾಗಿನಾವ್ । ಖೂಳನ ಕರೆಯೆ ಹೀ । ಯಾಳಿಸಿ ನಮ್ಮನು । ತಾಳುತ ಕೋಪವ ॥ ೧ ॥

ಶರಗಳ ಬಿಡುತ ನಮ್ಮ । ದೇಹವನೆಲ್ಲ । ಉರಿಸಿಯೋಡಿಸಿದಮಮ ॥
ತರಳನ ತರಲೆಮು । ಗರಿಯದು ಶೂರನು ।
ಅರಿದೆಮ್ಮ ರಕ್ಷಿಸು । ತೆರಳಿನೀ ಶಿಕ್ಷಿಸು ॥ ೨ ॥

॥ ಭೈರವಿ । ಏಕತಾಳ ॥

ಕೇಳುತ ಸುಭಟರ ನುಡಿಯ । ಬಲು । ತಾಳಿದ ವನಪತಿ ಖತಿಯ ॥
ಕಾಲನ ಪುರವನು ತೋರ್ವೆ।ರಿಪು । ಬಾಲನ ನೆತ್ತರ ಹೀರ್ವೆ ॥ ೧ ॥

ಹರನಿದಿರಾದರು ಬಿಡೆನು । ಆ । ಸುರಪತಿ ಬೇಡಲು ಕೊಡೆನು ॥
ನರಪತಿ ಬಾಲನ ಮದವ । ನಾ । ಹರಿಸುತ ತಾಳುವೆ ಮುದವ ॥ ೨ ॥

ಎನುತಲಿ ಚರರೊಡನಂದು । ಆ । ಹೆಣ ಸುಡುವಲ್ಲಿಗೆ ಬಂದು ॥
ಜನಪನ ಕಾಣುತ ಮುಂದು । ತಾ । ಕನಲುತ ಪೇಳಿದನಂದು ॥ ೩ ॥

॥ ಮಾರವಿ । ಏಕತಾಳ ॥

ಬಿಡುಬಿಡು ಬಾಲಕ । ಮಡಿದಿಹ ಜೀವಿಯ । ನುಡಿಲಾಲಿಸಿ ಕೇಳು ।
ಕೊಡದಿರೆ ನಿನ್ನನು । ಖಡುಗದೊಳೀಕ್ಷಣ । ಬಡಿದುರುಳಿಪೆ ತಾಳು ॥ ೧ ॥

ಎಲೆ ಬೇತಾಳನೆ । ಬಲುಹಿನೊಳೆನ್ನೊಳು । ಕಲಹಕೆ ನಿಂದರೆ ನಾ ॥
ಕೊಲುವೆನು ನಿನ್ನನು । ಸಲಹುವರಾರೆಲೊ । ಬಲುಸಾಹಸವೆನ್ನ ॥

ಶಂಕರಾಭರಣ । ಮಟ್ಟೆ ॥

ಭಳಿರೆ ಪೋರ ವಚನ ಶೂರ । ಬಲವ ಸವರಿ ಮದವ ತೋರಿ ।
ನಲಿಯೆ ನಿನ್ನ ತಿನುವೆ ಮುನ್ನ । ಗಳಹಬೇಡೆಲ ॥ ೧ ॥

ಮಡಿದವರನು ಬಿಡದೆತಿನುವ । ಹುಡುಗನೆನುವ ಧಡಿಗ ತನವ ।
ಕುಡಿದು ಮದಿರೆ ದುಡುಕಿಯೊದರೆ । ಕೆಡುವೆ ನೀನೆಲ ॥ ೨ ॥

ತೊರೆದು ರೀತಿ ಮರೆತು ನೀತಿ । ಅರಸ ನಡೆವ ತೆರದೊಳೆಸಗಿ ।
ಬರಿದೆ ಪೋರತನದಿ ವೈರ । ದುರಿಯ ನುರಿಸಿದೆ ॥ ೩ ॥

ಜಗದ ನಿಯಮ ಮೀರುತಧಮ । ಬಗುಳಲೇಕೆ ಸಾವೆ ಜೋಕೆ ।
ಮುಗಿದು ಕರವ ಮಣಿಸೆ ಶಿರವ । ಬಗೆಯೆ ಕೋಪವ ॥ ೪ ॥

ನುಡಿಗೆ ಕೋಪಗೊಂಡು ಬಾಣ । ಬಿಡಲು ಕಡಿಯೆ ಸುವನಪಾಲ ।
ಕಡುಗದಿಂದ ಕಡಿಯಲಾಗ । ಹುಡುಗ ಗಜರುತ ॥ ೫ ॥

॥ ವಾರ್ಧಕ ॥

ಮತ್ತ ನಿನಗುತ್ತರವನಿತ್ತು ಫಲವೆತ್ತಣದು । ಮತ್ತೆ ಹಿತದುಕ್ತಿ ಮನಹತ್ತಲು ಮಹತ್ತರವೆ ।
ನುತ್ತಯತಿಯಿತ್ತ ಕುಮುದಾಪ್ತ ಹಾಸಾಸ್ತ್ರವನ್ನೆತ್ತಿಜಪಿಸುತ್ತ ಖಳನ ॥
ಕತ್ತನುರೆ ಕತ್ತರಿಸೆನುತ್ತ ಬಿಡೆಹಾರುತ್ತ । ಮುತ್ತುತಿರೆ ಬಳಲುತ್ತ ಸತ್ತನೆನೆ ಚೀರುತ್ತ ।
ಮಿಳ್ತು ಸಲೆ ಸುತ್ತುತಿರೆ ಚಿತ್ತ ಶುಚಿವೆತ್ತು ಭಯ ಭಕ್ತಿಯಿಂ ನುಡಿದಜತನ ॥ ೧ ॥

॥ ಕಲ್ಯಾಣಿ । ಅಷ್ಟತಾಳ ॥

ಪಾಲಿಸೆನ್ನನುದಿನವು । ಯಾಚಿಪೆನೀಗ । ಪಾಲಿಸೆನ್ನನುದಿನವು ॥ ಪ ॥
ಪಾಲಿಸೆನ್ನನುದಿನವು ಸಜ್ಜನ । ಪಾಲಸುಗುಣವಿ।ಶಾಲ ಶರಣಸು । ಶೀಲ ನೃಪಕುಲ ।
ಬಾಲ ಶೌರ್ಯವಿ । ಲೋಲವರಭೂ।ಪಾಲನಿರುಪಮ ॥ ಅ.ಪ. ॥

ಶರದುರಿಯನು ತಾಳೆನು । ಯುದ್ಧದಿಸೋತು । ಶರಣನೆನ್ನಿಸಿ ಬಾಳೆನು ।
ಪುರದ ಹೊರತಾ।ಗಿರುವ ವಿಪಿನಾಂ।ತರದಿವೈರವ। ಮರೆತು ಜೀವಿಪ ।
ತೆರದೊಳೆಸಗೈ। ಕರವ ಮುಗಿಯುವೆ। ಗರುವವಿಲ್ಲವು। ಅರಸಗುವರನೆ ॥ ೨ ॥

॥ ಭಾಮಿನಿ ॥

ಪ್ರೇತನಾಥನೆ ಪಾತಕಿಯು ನೀ । ನೇತರಪರಾಧವನು ಗೈದರು ।
ಸೋತು ಜೀವಾಪೇಕ್ಷಿಯಾಗಿಹೆ, ಶರಣರಕ್ಷಣೆಯು ॥
ನೀತಿರಾಜನ್ಯರಿಗೆ ಪೋಗೈ। ಮಾತ ಮೀರದಿರೆನಲು ನಮಿಸುತ ।
ಭೀತ ತೆರಳಲು ಬರುತ ನುಡಿದಳು ರಂಭೆ ಮರುಗುತಲಿ ॥ ೧ ॥

॥ ಬೇಗಡೆ । ತ್ರಿವುಡೆ ॥

ಏನ ಮಾಡಿದೆ ತಂಗಿ ಪೇಳು ನೀನೀಗ । ಮಾನಿನಿಗನುಚಿತ ಪಾಪದ ಭೋಗ ॥ ಪ ॥
ಏನ ಮಾಡಿದೆಯಸಮಕೆಲಸವ । ನೇನಿದರ ಫಲಹೊಂದ ಬೇಕೆಲೆ ।

ಜಾಣೆ ಕಾರಣ ಕಾಣೆ ಗುಣದಲಿ ॥ ಅ. ಪ ॥
ಮಾನವನ ಮರಣಾಭಿಲಾಷೆಗೆ । ಜಾಣೆ ಕಾರಣ ಕಾಣೆ ಗುಣದಲಿ
ಮರುಳರಂದದಿ ಕೊಂದಿಹೆ । ಸಲ್ಲದ ಕಾರ್ಯ । ನಿರತ ದೋಷವ ಹೊಂದಿಹೆ ॥
ಮುರಿದನೇ ವಾಸವನ ಲೋಕವ । ಸರಿದನೇ । ಮೋಸದಲಿನಾಕವ ।
ಇರಿದನೇ । ನಾರಿಯರ ಮನವನು । ಕರೆದನೇ । ಬಾರೆನುತಲೆಮ್ಮನು ।
ನರಪತಿಯು ಸಚ್ಚರಿತ ಸದ್ಗುಣ । ಭರಿತ ನಾಗಿಹನವನ ಬದುಕಿಸು ।
ಅರಿತ ನಾದರೆ ಸುರಪ ಕೋಪದಿ । ಭರದಿ ಶಾಪವ ಕೊಡುವ ನಿಶ್ಚಯ ॥ ೧ ॥

॥ ಭಾಮಿನಿ ॥

ರಂಭೆ ಪೇಳಿದ ವಚನದಿಂದಲಿ । ದಂಭವನು ತೊರೆಯುತ್ತಲೂರ್ವಶಿ ।
ತುಂಬು ಹೃದಯದಿ ಕೃತಿಗೆ ನಾಚುತ ಕಮಲನಯನನನು ॥
ಕಂಬುಕಂಧರೆ ಬದುಕಿಸೇಳಲು । ಅಂಬರದಿ ಭಾಷಣವ ಕೇಳುತ ।
ಮುಂಬರಿದು ರೋಷದಲಿ ಮಾಳವಪತಿಯ ಸಂಭವನು ॥ ೧ ॥

॥ ಮಾರವಿ ಏಕತಾಳ ॥

ಉರ್ವೀಶನ ತಾ । ಊರ್ವಶಿಯೊತೆರ । ಗರ್ವದಿ ಕೊಲಬಹುದೆ ॥
ಗರ್ವವ ನಿಳುಹುವೆ । ಸರ್ವರು ತಿಳಿಯೆ ಸುಪರ್ವನು ಬರೆ ಬಿಡದೆ ॥ ೧ ॥

ಗೆಲುವೆನೆನುತ್ತಲಿ । ಬಲದೊಳಗಾಯುಧ। ಕಳುಹಲಿಕಾಕ್ಷಣದಿ ॥
ಬಲರೆಕ್ಕೆಯ ತಾಕೆಳಗುರುಳಿಸುತಲಿ । ಇಳೆಪಾಲಕನಿರಲು ॥ ೨ ॥

॥ ಸೌರಾಷ್ಟ್ರ । ತ್ರಿವುಡೆ ॥

ಕೆಳಗುರುಳೆ ಊರ್ವಶಿಯ ರೆಕ್ಕೆಯು । ತಳಮಳಿಸಿ ಮರುಗುತ್ತ ಫಕ್ಕನೆ ।
ಬಳಿವಿಡಿದು ಭೂಮಿಪನ ಕಾಲಿಗೆ । ತಲೆಯ ಬಾಗಿ ॥ ೧ ॥

॥ ಕಾಂಭೋಜಿ । ಅಷ್ಟತಾಳ ॥

ಮಕ್ಕಳಾಟಿಕೆ ಯಾಕೆ । ರೆಕ್ಕೆ ನಿನಗೆ ಬೇಕೆ । ರಾಜಹಂಸ ॥
ಫಕ್ಕನೆ ಕೊಡು ಜೋಕೆ । ಸೊಕ್ಕಲು ಬಿಡಲೀಕೆ । ರಾಜಹಂಸ ॥ ೧ ॥
ಉಳಿಸಿದವಳು ನಾನೆ । ಅಳಿಸಿದವಳುನಾನೆ । ರಾಜಹಂಸ ॥
ಇಳೆಯಲ್ಲಿ ನನಗೆಣೆ । ತಿಳಿನೀನು ನಾಜಾಣೆ । ರಾಜಹಂಸ ॥ ೨ ॥

॥ ಮಾರವಿ ಏಕತಾಳ ॥

ಬೆಡಗಿನ ನುಡಿಯನು । ನುಡಿಯದಿರೆನ್ನೊಳು । ಜಡಜಾನನೆಕೇಳು ॥

ಕೆಡುಕಿನ ಕೆಲಸವ । ಬೆಡಗಿಯೆ ಮಾಡಿದೆ । ನಡೆನಿನ್ನದು ಹಾಳು ॥ ೧ ॥

॥ ಬಿಲಹರಿ । ಏಕತಾಳ ॥

ಭೂವರ ಲಾಲಿಸು ಕೋಪದ ಮಾತೇಕೆ । ಕಾವಕೊಲುವ ಶಕ್ತಿ ನಿನ್ನೊಳಗಿಹುದು ॥
ಭಾವಕಿಯಲಿ ಶೌರ್ಯ ಯಾವುದಕಾಗಿದು । ಭಾವಿಸಲಬಲೆ ನಾ । ಈವುದು ತಿಳಿದು ॥ ೧ ॥

॥ ಮಾರವಿ । ಏಕತಾಳ ॥

ಅಬಲೆಯೆ ಪಾಪದಿ । ಪ್ರಬಲೆಯೆ ಮೋಸದಿ । ಸುಬಲೆಯೆನೀಕೇಳು ॥
ಸೊಬಗಲ್ಲವು ಕೃತಿ । ವಿಬುಧಾಂಗನೆಗಿದು । ವಿಭುಮೆಚ್ಚನು ತೆರಳು ॥ ೧ ॥

॥ ತುಜಾವಂತು । ಝಂಪೆ ॥

ಧರಣೀಶ ಸುತನೀನು ತಿಳಿದಿರುವೆ ಧರ್ಮ । ಅರಿಯದೇ ಮಾಡಿದೆನು ಈ ತೆರದಕರ್ಮ ॥
ಶರಣರನು ರಕ್ಷಿಸುವ । ದುರುಳರನು ಶಿಕ್ಷಿಸುವ ।
ಪರಿಭವದೊಳೆತ್ತಿ ಆ । ಧರಿಸುವುದು ಧರ್ಮ ॥
ತರುಣಿ ನಾ ಕೈ ಮುಗಿದು । ಸೆರಗೊಡ್ಡಿ ಬೇಡುವೆನು ।
ಕರುಣಿಸಲು ರೆಕ್ಕೆಯನು । ಸರಿಯಾದ ಕರ್ಮ ॥ ೧ ॥

॥ ಭಾಮಿನಿ ॥

ನಾರಿಲೋಕಕೆ ಮಾರಿ ಜನಕಪ । ಕಾರಿ ಮೋಹವ ಬೀರಿ ನರಕಕೆ ।
ದಾರಿ ತೋರುತ ಭೂರಿ ಮತ್ಸರ ಬೀರಿ ಮದವೇರಿ ॥
ಹಾರಿಬಲು ವಿಷಕಾರಿ ನೀತಿಯ । ಮೀರಿ ನಡೆವವಿಚಾರಿ ಸದ್ಗುಣ ।
ವೈರಿ ದುರಹಂಕಾರಿ ಜಗಕಪಕಾರಿ ತಿಳಿಯೊ ಸರಿ ॥ ೧ ॥

ವೀರ ಕೇಳೈ ಆದಿ ಶಕ್ತಿಯು । ನಾರಿಗೃಹ ದೇವತೆ ಸುಮಂಗಲೆ ।
ನಾರಿ ಪೊರೆಯುವ ತಾಯಿ ನಿರ್ಮಲೆ ಚೆಲುವೆ ಸುಖಲೋಲೆ ॥
ನಾರಿ ಸಹನಾಶೀಲೆ ಜಗಕುಪ । ಕಾರಿ ನಗೆಯನು ಬೀರಿಶೋಕ ನಿ ।
ವಾರಿಸುತ ಸರಿದಾರಿ ತೋರುವ ಬಾಲೆಯಲ್ಲಬಲೆ ॥ ೨ ॥

॥ ಸಾಂಗತ್ಯ । ರೂಪಕ ॥

ಸಾರಸನಯನೆಯ ಮಾತ ಕೇಳುತ ಹಂಸ । ಭೂರಿ ಸಂತೋಷವ ತಳೆದು ॥
ವಾರನಾರಿಯೆ ತವ ಮದಮೋಹ ವಿಳಿಯಿತು । ಸಾರುಪುರಕೆ ಎನೆ ತಿಳಿದು ॥ ೧ ॥

ರೆಕ್ಕೆಯ ಕೊಡು ನೀನು ಠಕ್ಕನೆಸಗೆ ನಾನು । ಫಕ್ಕನೆ ಕರೆಯೆ ನೀ ಬಂದು ॥
ತಕ್ಕಸೇವೆಯಗೈವೆ ರಕ್ಕಸಾರಿಯು ಸಾಕ್ಷಿ । ಮುಕ್ಕಣ್ಣ ಕಾಯುವನಿಂದು ॥ ೨ ॥

॥ ಸೌರಾಷ್ಟ್ರ । ತ್ರಿವುಡೆ ॥

ನುಡಿಗೆ ರೆಕ್ಕೆಯ ಕೊಡಲು ಊರ್ವಶಿ । ಪೊಡವಿ ಪಾಲಗೆ ನಮಿಸಿ ತೆರಳಳು ।
ಮಡಿದು ಬದುಕಿದ ಕಂಜನಯನಗೆ । ನಡೆದ ವಿಷಯ ॥ ೧ ॥

ಬಿಡದೆ ಹೇಳಲು ಜಡಜಭಾಂಧವ । ನೊಡನೆ ಮೂಡಲು ಬಿಡದಿಗಿಬ್ಬರು ।
ಸಡಗರದಿ ತಾ ಬರಲು ನೋಡುತ । ಪೊಡವಿ ಪಾಲ ॥ ೨ ॥

॥ ವಾರ್ಧಕ ॥

ಸಾನಂದದಿಂದಲೀರ್ವರನಪ್ಪಿ ಮುದ್ದಿಸುತ ।
ಮಾನನಿಧಿ ನಡೆದ ಕಥೆಯನ್ನೆಲ್ಲ ಕೇಳುತ್ತ ।
ದಾನವಾರಿಯ ಕರುಣೆಯಿರಲೆಮಗೆ ಭಯವಿಲ್ಲವೆನುತ ಸದ್ಭಕ್ತಿಯಲ್ಲಿ ॥
ಸೂನುಸುತೆ ಜಾಮಾತ ಸತಿ ಸಹಿತ ಮುರಹರನ ।
ಧ್ಯಾನಿಸುತ ಮಂಗಲವ ಹಾಡಿದರು ಆರತಿಯ ।
ಮಾನಿನಿಯರೆತ್ತಿದರು ಜನರು ನಲಿದಾಡಿದರು ಸುರರು ಹೂಮಳೆಯ ಚೆಲ್ಲಿ ॥ ೧ ॥

॥ ಯಮುನಾಕಲ್ಯಾಣಿ । ತ್ರಿವುಡೆ ॥

ಮಂಗಲಂ ಜಯ । ಮಂಗಲಂ ಜಯ । ಮಂಗಲಂ ಶ್ರೀ ರಾಮಗೆ ॥
ಮಂಗಲಂ ಜಯ । ಮಂಗಲಂ ಜಯ । ಮಂಗಲಂ ರಘುರಾಮಗೆ ॥ ೧ ॥

ತುಂಗವಿಕ್ರಮಿ ಮಂಗಲಾಂಗಮ । ತಂಗಕುಲದಭಿರಾಮಗೆ ॥ ಭಂಗಿಸಲು ಭೂ ।
ರಂಗದೊಳು ಜಾ। ತಂಗೆ ಖಳಕುಲ ಭೀಮಗೆ ॥ ೨ ॥

ಕಥಾ ಸಾರಾಂಶ

ಗಾಯತ್ರಿ :

"ಋಗ್ವೇದದ ಕಥೆಗಳು" ಎಂಬ ಕೃತಿಯಿಂದ ಈ ಕಥಾವಸ್ತು ಆರಿಸಲ್ಪಟ್ಟಿದೆ. ಗಾಯತ್ರಿ ಮತ್ತು ನೃಮೇಧ, ಸುವ್ರತನ ಮಕ್ಕಳು. ನೃಮೇಧ ಚಿಕ್ಕವಯಸ್ಸಿನಲ್ಲೇ ತಪಸ್ಸಿಗೆ ಹೋಗುತ್ತಾನೆ. ಗಾಯತ್ರಿ ಹಿರಿಯಳಾದ ನನಗೆ ರಾಜ್ಯಾಧಿಕಾರ ಸಿಗಬೇಕೆಂದು ತಂದೆಯಲ್ಲಿ ವಾದಿಸಿ ತಿರಸ್ಕೃತಳಾಗಿ ಬರುವಾಗ, ಮಾರ್ಗಮಧ್ಯದಲ್ಲಿ ಅವಳನ್ನು ವಿಶ್ವಾವಸು ಸೆಳೆದೊಯ್ದು ಸೆರೆಯಲ್ಲಿರಿಸುತ್ತಾನೆ. ಸುವ್ರತನ ಅಳಿಯಂದಿರಾದ ಮಿಮದಪ್ರಮದರು, ನಾರದರಿಂದ ಈ ವಿಚಾರ ತಿಳಿದು, ವಿಶ್ವಾವಸುವಿನಲ್ಲಿ ಸೆಣಸಿ ಅಳಿಯುತ್ತಾರೆ. ತಪಸಿಗೆಂದು ಹೋದ ನೃಮೇಧ ಮನಸ್ಸನ್ನು ಬದಲಿಸಿ, ಗೌತಮನ ಬಳಿಸೇರಿ ಸಕಲವಿದ್ಯಾಪಾರಂಗತನಾಗುತ್ತಾನೆ. ಅವನ ಆಜ್ಞೆಯಂತೆ ರಾಜ್ಯಕ್ಕೆ ಬಂದು, ತಂದೆಯಿಂದ ಅಕ್ಕ ಗಾಯತ್ರಿ ಕೋಪಿಸಿ ಹೋದ ವಿಚಾರ ತಿಳಿದು, ಅವಳನ್ನು ಕರೆತರಲು ಹೋಗಿ, ವಿಶ್ವಾವಸುವನ್ನು ಸೋಲಿಸುತ್ತಾನೆ. ಅಲ್ಲಿಗೆ ಬಂದ ನಾರದ "ಗಾಯತ್ರಿ-ವಿಶ್ವಾವಸು" ಇವರ ಜನ್ಮ ವೃತ್ತಾಂತವನ್ನು ತಿಳಿಸುತ್ತಾನೆ. ಗಾಯತ್ರಿ ವಿಶ್ವಾವಸು ಸತಿಪತಿಯರಾಗುತ್ತಾರೆ. ರಾಜ್ಯ ನೃಮೇಧನಿಗಾಗುತ್ತದೆ.

ಯಮಯಮಿ :

"ವೇದದೊಳಗಣಕಥೆಗಳು" ಎಂಬ ಕೃತಿಯಿಂದ ಇದರ ಕಥಾ ವಸ್ತುವನ್ನು ಆರಿಸಲಾಗಿದೆ. ಕಾಲವು ಮನುಷ್ಯನನ್ನು ಧೃತಿಗೆಡಿಸುತ್ತದೆ, ಎನ್ನುವ ವಿಚಾರದಲ್ಲಿ ಶಿವ-ಪಾರ್ವತಿಯರಲ್ಲಿ ಚರ್ಚೆ ನಡೆಯುತ್ತದೆ. ಯಮಳರಾದ **"ಯಮಯಮಿ"** ಸೂರ್ಯನ ಮಕ್ಕಳು. ಯಮಿ ಅಣ್ಣನಾದ ಯಮನನ್ನೇ ಕಾಮಿಸುತ್ತಾಳೆ. ಯಮ ಶಪಿಸಿ, ಅವಳನ್ನು ತೊರೆದು ಹೋಗುತ್ತಾನೆ. ಒಬ್ಬಂಟಿಗಳಾದ ಯಮಿಯನ್ನು ಕಾಶ್ಮೀರದ ರಾಜ ವಿಕ್ರಮಸೇನನು, ಕಾಮಿಸಿ ಸೆಳೆದೊಯ್ದು ಸೆರೆಯಲ್ಲಿರಿಸುತ್ತಾನೆ. ತೊರೆದು ಹೋದ ಪತ್ನಿ ಸರಣ್ಯಾದೇವಿಯನ್ನು ಹುಡುಕುತ್ತಿರುವ ಸೂರ್ಯನಿಗೆ, ನಾರದನ ಮೂಲಕ ಮಗಳ ವಿಚಾರ ತಿಳಿದು ವಿಕ್ರಮಸೇನನನ್ನು ಕೊಂದು ಯಮಿಯನ್ನು ಬಿಡಿಸುತ್ತಾನೆ. ಮತ್ತೆ ಯಮಿಯು ಯಮನನ್ನು ಹುಡುಕುತ್ತಾ ಬಂದು, ಅವನ ಕಾಲಿಗೆರಗಲು, ಅವಳನ್ನು ಕೊಲ್ಲಲು ಖಡ್ಗವೆತ್ತುತ್ತಾನೆ. ಶಿವ ತಡೆಯುತ್ತಾನೆ. ಯಮಿಯನ್ನು ವರಿಸಲು ಹೇಳುತ್ತಾನೆ. ಒಪ್ಪದ ಅವನನ್ನು ಕೊಲ್ಲಲು ಶೂಲವೆತ್ತಿದಾಗ, ಬ್ರಹ್ಮ, ಪಾರ್ವತಿ, ನಾರದರು ತಡೆಯುತ್ತಾರೆ. ಯಮನಿಗೆ ಶ್ಯಾಮಿನಿಯ ಪಟ್ಟಕಟ್ಟುತ್ತಾರೆ. ಯಮಿ ಯಮುನೆಯಾಗಿ ಹರಿಯುತ್ತಾಳೆ.

ಕಲಹಪ್ರಿಯ ನಾರದ :

ಭಾಗವತದ ಕಥೆಯಿದು. ಯೋಗನಿದ್ರೆಯಲ್ಲಿದ್ದ ವಿಷ್ಣುವಿನ ನಾಭಿ ಕಮಲದಲ್ಲಿ ಬ್ರಹ್ಮನು ಹುಟ್ಟಿ ಇರಲು, ಅವನ ಮನಸ್ಸಿನಿಂದ ನಾರದ ಜನಿಸುತ್ತಾನೆ. ವಿಷ್ಣು ಬ್ರಹ್ಮರು

ಎಚ್ಚರಗೊಳ್ಳುತ್ತಿರಲು ಅವರನ್ನು ನೋಡಿ ಅವರಿಬ್ಬರನ್ನು ಏಕಕಾಲದಲ್ಲಿ ನುತಿಸುತ್ತಾನೆ. ಆಗ ವಿಷ್ಣು ಬ್ರಹ್ಮರು ತಮ್ಮ ತಮ್ಮ ಮಗ ಇವನೆಂದು ಜಗಳ ಮಾಡುತ್ತಾರೆ. ಅಲ್ಲಿಗೆ ಲಕ್ಷ್ಮಿಯು ಬಂದು ಜಗಳ ನಿಲ್ಲಿಸಿ ಇವನು ಬ್ರಹ್ಮನ ಮಗನೆಂದು ಹೇಳಿ "ಮಹತಿ" ಎನ್ನುವ ವೀಣೆಯನ್ನು ಕೊಡುತ್ತಾಳೆ. ವಿಷ್ಣುವು ನಾರದನಿಗೆ "ಕಲಹಪ್ರಿಯ" ಎನ್ನುವ ಬಿರುದನ್ನು ಕೊಡುತ್ತಾನೆ.

ದಕ್ಷಶಾಪ :

ಭಾಗವತದ ಕಥೆ. ದಕ್ಷನು ಹರಿದ್ವಾರದಲ್ಲಿ ಯಾಗ ಮಾಡುತ್ತಾನೆ. ಯಾಗ ಶಾಲೆಗೆ ದಕ್ಷ ಬಂದಾಗ ಎಲ್ಲರೂ ಎದ್ದು ಗೌರವಿಸಿದರೆ, ಬ್ರಹ್ಮಶಿವರು ಏಳಲಿಲ್ಲ. ಕೋಪಗೊಂಡ ದಕ್ಷಶಿವನಿಗೆ ಶಾಪಕೊಡುತ್ತಾನೆ. ನಂದಿ ದಕ್ಷನಿಗೆ ಶಾಪಕೊಡುತ್ತಾನೆ. ಭೃಗು ನಂದಿಗೆ ಶಾಪ ಕೊಡುತ್ತಾನೆ. ಶಿವನು ಎದ್ದು ಹೋಗುತ್ತಾನೆ.

ತಾರಾ ಶಶಾಂಕ :

ಭಾಗವತದ ಕಥೆ. ಚಂದ್ರನು ಗುರುಪತ್ನಿ ತಾರೆಯನ್ನು ತನ್ನೊಡನೆ ತಂದಿರಿಸುತ್ತಾನೆ. ಅದೇ ಕಾರಣಕ್ಕೆ ಇಂದ್ರ ಚಂದ್ರರ ಒಳಗೆ ಯುದ್ದ ನಡೆಯುತ್ತದೆ. ಹರ ವಿಧಿಯರು ಬಂದು ಯುದ್ಧ ನಿಲ್ಲಿಸಿ, ತಾರೆಯನ್ನು ಬೃಹಸ್ಪತಿಯ ಜೊತೆ ಕಳುಹಿಸುತ್ತಾರೆ. ದಕ್ಷನು ಹರ್ಯಶ್ವ ಶಬಳಾಶ್ವರನ್ನೂ ಸೃಜಿಸಲು ನಾರದನು ಅವರನ್ನೆಲ್ಲ ತತ್ತ್ವ ಬೋಧೆ ಮಾಡಿ ಕಾಡಿಗೆ ಕಳುಹಿಸುತ್ತಾನೆ. ದಕ್ಷನು ನಿಂತಲ್ಲಿ ನಿಲ್ಲದಿರೆಂದು ನಾರದನಿಗೆ ಶಾಪ ಕೊಡುತ್ತಾನೆ. ಬಳಿಕ ಅರುವತ್ತು ಜನ ಪುತ್ರಿಯರನ್ನು ಪಡೆದ ದಕ್ಷನು ಅವರಲ್ಲಿ ಇಪ್ಪತ್ತೇಳು ಜನರನ್ನು ಚಂದ್ರನಿಗಿತ್ತು ಮದುವೆ ಮಾಡುತ್ತಾನೆ. ಆದರೆ ಅವರಲ್ಲಿ ರೋಹಿಣಿಯನ್ನೇ ಹೆಚ್ಚಾಗಿ ಚಂದ್ರನು ಪ್ರೀತಿಸುತ್ತಿರುವುದನ್ನು ತಿಳಿದ ದಕ್ಷನು ಕ್ರುದ್ಧನಾಗಿ ಬಂದು ಚಂದ್ರನೊಡನೆ ಸೆಣಸಿ ಸೋತು ಕ್ಷೀಣನಾಗೆಂದು ಅವನಿಗೆ ಶಾಪಕೊಟ್ಟು ತೆರಳುತ್ತಾನೆ.

ವೇನವಧ :

ಭಾಗವತದಿಂದ ಆರಿಸಲಾಗಿದೆ. ಧ್ರುವನ ಸಂತತಿಯಲ್ಲಿ ಹುಟ್ಟಿದ ಅಂಗನೆಂಬ ರಾಜ, ಪತ್ನಿ ಸುನೀಥೆಯೊಂದಿಗೆ ರಾಜ್ಯವಾಳುತ್ತಿದ್ದ. ಮಕ್ಕಳಿಲ್ಲದ ಕಾರಣ ಪುತ್ರಕಾಮೇಷ್ಟಿಮಾಡಿ ವೇನನೆಂಬ ಮಗನನ್ನು ಪಡೆದ. ಇವನು ದುರ್ಗುಣಿ. ಎಷ್ಟು ಪ್ರಯತ್ನಿಸಿದರೂ ಇವನನ್ನು ತಿದ್ದಲು ಆಗದಿದ್ದಾಗ ಎಲ್ಲವನ್ನೂ ಬಿಟ್ಟು ಮಧ್ಯ ರಾತ್ರಿಯಲ್ಲಿ ಕಾಡಿಗೆ ಹೋಗುತ್ತಾನೆ. ರಾಜ್ಯ ಅನಾಯಕವಾದಾಗ ಮುನಿಗಳು ಸುನೀಥೆಯೊಂದಿಗೆ ವೇನನಿಗೆ ಪಟ್ಟ ಕಟ್ಟುತ್ತಾರೆ. ಆದರೂ ಕೆಟ್ಟ ಕಾರ್ಯಗಳನ್ನು ಬಿಡದೆ ಇದ್ದಾಗ, ಯಾಗಾದಿಗಳಿಗೆ ನಿಷೇಧ ಹೇರಿದಾಗ ಇವನನ್ನು ಮುನಿಗಳು ಕೋಪಗೊಂಡು ಶಾಪಕೊಟ್ಟು ಕೊಲ್ಲುತ್ತಾರೆ.

ಪೃಥು ಚಕ್ರವರ್ತಿ :

ಭಾಗವತದ ಕಥೆಯಿದು, ವೇನನ ಶವವನ್ನು ಸುನೀಥೆ ರಕ್ಷಿಸುತ್ತಾಳೆ. ರಾಜ್ಯ ಅನಾಯಕವಾದಾಗ ಮುನಿಗಳು ವೇನನ ತೊಡೆಯನ್ನು ಮಥಿಸಲು ನಿಷಾದ ಹುಟ್ಟಿದ. ಅವನನ್ನು ಕಾಡಿಗಟ್ಟಿ ತೋಳುಗಳನ್ನು ಮಥಿಸಲು ಪೃಥು, ಅರ್ಚಿ ಹುಟ್ಟುತ್ತಾರೆ. ಮತ್ತೆ ಸತಿ ಪತಿಯರಾಗುತ್ತಾರೆ. ಪೃಥು ರಾಜನಾಗುತ್ತಾನೆ. ಮತ್ತೆ ರಾಜ್ಯ ಬರಗಾಲ ಪೀಡಿತವಾಗಲು, ಜನರ ಹಾಹಾಕಾರ ಹೆಚ್ಚಾಗಲು ಇದಕ್ಕೆ ಭೂದೇವಿಯೇ ಕಾರಣವೆಂದು ಅವಳನ್ನು ಕೊಲ್ಲಲು ಹೊರಟಾಗ ಅವಳು ಗೋವಿನ ರೂಪವನ್ನು ತಾಳಿ ಓಡುತ್ತಾಳೆ. ಅವಳನ್ನು ಹಿಡಿದು ಕೊಲ್ಲಹೊರಟಾಗ, ಅವಳಿಚ್ಛೆಯಂತೆ ಸ್ವಾಯಂಭುಮನುವನ್ನೇ ಕರುಮಾಡಿ, ತಾನೇ ಗೌಳಿಗನಾಗಿ ಕರೆಯಲು ಇಷ್ಟಾರ್ಥಸಿದ್ದಿಸುತ್ತದೆ. ಮುಂದೆ ನೂರು ಅಶ್ವಮೇಧಗಳನ್ನು ಮಾಡಿ ಅದರ ಸತ್ಫಲವನ್ನು ಪಡೆಯುತ್ತಾನೆ.

ಭರತ ದಿಗ್ವಿಜಯ :

ಈ ಕಥೆಯನ್ನು ಭಾರತದಿಂದ ಆರಿಸಲಾಗಿದೆ. ಭರತನು ಸುದೀಪ ದೃಢನೇಮಿಯರೊಡನೆ ದಿಗ್ವಿಜಯಕ್ಕೆ ಹೊರಟು ಆಂಧ್ರ ದೇಶವನ್ನು ಮುತ್ತುವನು. ಅಲ್ಲಿಯ ದೊರೆ ಸುವೀರನು ಯುದ್ಧಕ್ಕೆ ಅಣಿಯಾಗಲು ಅವನ ಪತ್ನಿ ಮದಿರೆ ಬಂದು ಸಂಧಿ ನಡೆಸಲು ಹೇಳುವಳು. ಅದಕ್ಕೊಪ್ಪದ ಸುವೀರನು ಭರತನೊಡನೆ ಸೆಣಸಾಡಿ ಮಡಿಯುವನು. ಮುಂದೆ ಭರತನು ಹೂಣ ದೇಶವನ್ನು ಆಕ್ರಮಿಸಲು ಅಲ್ಲಿಯ ದೊರೆ ರಿಪುಂಜಯನು ಸೆಣಸಿ ಮಡಿಯಲು, ಭರತನು ವಿಜಯೋತ್ಸಾಹದಿಂದ ಮುಂದರಿಯವನು.

ಶ್ರೀಮತೀ ಸ್ವಯಂವರ :

ಇದನ್ನು ತೆಲುಗು ರಾಮಾಯಣದಿಂದ ಆರಿಸಲಾಗಿದೆ. ಮಕರಧ್ವಜನು ವಿಷ್ಣುವನ್ನು ಕುರಿತು ತಪಸ್ಸು ಮಾಡಿ, ಚಿರಂಜಿವೀತ್ವವನ್ನೂ ಚಕ್ರವನ್ನೂ ಪಡೆಯುತ್ತಾನೆ. ಒಡನೆ ತಾಮಸ ಗುಣದಿಂದ ಹರಿದ್ವೇಷಿಯಾಗುತ್ತಾನೆ. ದೇಶದಲ್ಲಿದ್ದ ಹರಿಮಂದಿರಗಳನ್ನು ನಾಶಮಾಡುತ್ತಾನೆ. ಶ್ರೀಮತಿ ಅವನ ಮಗಳು, ಹರಿಭಕ್ತೆ. ತಂದೆಗೆ ಒಳಿತಾಗಲೆಂದು ಹರಿಪೂಜೆ ಮಾಡುತ್ತಿರುವಾಗ ಅಲ್ಲಿಗೆ ಬಂದು ಹರಿವಿಗ್ರವನ್ನು ನಾಶ ಮಾಡಿ, ಮಗಳನ್ನು ಮೆಟ್ಟಿ ಉರುಳಿಸುತ್ತಾನೆ. ಗುರು ಪ್ರಗಲ್ಭನ ಜೊತೆಕಳುಹಿಸಿ, ಹರಿಭಕ್ತಿ ಬಿಡಿಸುವಂತೆ ಪ್ರಯತ್ನಿಸುತ್ತಾನೆ. ಆಗದಾಗ ಹೊಡೆದು ಸೆರಮನೆಯಲ್ಲಿರಿಸುತ್ತಾನೆ. ಅವಳು ಹರಿಯನ್ನೇ ವರಿಸಲು ಇಚ್ಛಿಸುತ್ತಾಳೆ. ಮಕರಧ್ವಜ ಸ್ವಯಂವರ ರಚಿಸಿ ಬೇರೆಯವರಿಗೆ ಕೊಟ್ಟು ಮದುವೆ ಮಾಡಲು ನಿಶ್ಚಯಿಸುತ್ತಾನೆ. ವೈಕುಂಠಕ್ಕೆ ಹೋದ ನಾರದಪರ್ವತರು ವಿಷ್ಣುವನ್ನೂ, ಮಾರನನ್ನೂ ನಿಂದಿಸುತ್ತಾರೆ. ಕುಪಿತನಾದ ಮಾರ, ಕಾಮುಕರಾಗಿ ಅಪಮಾನಕ್ಕೀಡಾಗಿರಿ ಎಂದು ಶಪಿಸಿ ಬಾಣ ಪ್ರಯೋಗ ಮಾಡುತ್ತಾನೆ. ಬರುವಾಗ ಕಾಮುವಶರಾಗಿ ಹೆಣ್ಣ ಮೋಹ ಉಂಟಾಗುತ್ತದೆ. ಬಳೆಗಾರರಾಗಿ ಶ್ರೀಮತಿಯು

ಇಂಗಿತವನ್ನು ತಿಳಿಯಲು ಬರುತ್ತಾರೆ. ದಾರಿಯಲ್ಲಿ ಸಿಕ್ಕ ಮಂತ್ರಿ ಕುಮಾರಿಯೇ ಶ್ರೀಮತಿಯೆಂದು ಭ್ರಮಿಸಿ, ಅವಳಿಂದ ಅಪಮಾನಿತರಾಗಿ ಮತ್ತೆ ಮಕರಧ್ವಜನಲ್ಲಿಗೆ ಬಂದು ಶ್ರೀಮತಿಯನ್ನು ಕೇಳುತ್ತಾರೆ. ಪರಸ್ಪರ ವಂಚಿಸಲೆಳಸಿ, ನಾರದ ಪರ್ವತರು, ವಿಷ್ಣುವಿನಿಂದ ಕರಡಿ ಮಂಗನ ಮುಖದವರಾಗಿ ಸ್ವಯಂವರದಲ್ಲಿ ಅಪಮಾನಿತರಾಗುತ್ತಾರೆ. ಶ್ರೀಮತಿ ವಿಷ್ಣುವನ್ನು ವರಿಸುತ್ತಾಳೆ. ರಣದಲ್ಲಿ ಮಕರಧ್ವಜ ಸೋತು ಹರಿಪಾದ ಸ್ಪರ್ಶದಿಂದ ಪುನೀತನಾಗುತ್ತಾನೆ. ನಾರದ ಪರ್ವತರು, ಶ್ರೀಮತಿ ಮತ್ತು ವಿಷ್ಣುವಿಗೆ ಶಾಪಕೊಡುತ್ತಾರೆ.

ವೀರವರ ಅಗಸ್ತ್ಯ :
ಭಾಗವತದ ಕಥೆಯಿದು. ಕಾಲಕೇಯರು ಇಂದ್ರನನ್ನು ಸೋಲಿಸಿ, ಸಕಲ ವಸ್ತುಗಳನ್ನು ತೆಗೆದುಕೊಂಡು ಸಾಗರದೊಳಗೆ ಅಡಗಿರುತ್ತಾರೆ. ಇಂದ್ರನು ಶ್ರೀ ಹರಿಯು ಹೇಳಿದಂತೆ ಅಗಸ್ತ್ಯಮಹರ್ಷಿಯಲ್ಲಿಗೆ ಹೋಗಿ, ಕಾಲಕೇಯರನ್ನು ಕೊಲ್ಲುವಂತೆ ಪ್ರಾರ್ಥಿಸುತ್ತಾನೆ. ಅಗಸ್ತ್ಯನು ಅವರೊಂದಿಗೆ ಕಡಲತಡಿಗೆ ಬಂದು, ಇಂದ್ರನಲ್ಲಿ ನಾನು ಸಾಗರದ ನೀರನ್ನೆಲ್ಲಾ ಕುಡಿಯುತ್ತೇನೆ. ಆಗ ನೀವು ರಾಕ್ಷಸರನ್ನು ಕೊಲ್ಲಿ ಎನ್ನುತ್ತಾನೆ. ಹಾಗೆ ಎಲ್ಲಾ ನೀರನ್ನು ಕುಡಿಯುತ್ತಾನೆ. ಕಾಲಕೇಯರನ್ನು ಕೊಲ್ಲುತ್ತಾರೆ. ಮತ್ತೆ ಕುಡಿದ ನೀರನ್ನು ಹೊರಬಿಟ್ಟಾಗ ಸಮುದ್ರ ತುಂಬಿಕೊಳ್ಳುತ್ತದೆ.

ಪರಶುರಾಮ ವಿಜಯ :
ಪರಶುರಾಮನು ಕ್ಷತ್ರಿಯರನ್ನು ಕೊಲ್ಲುವುದಕ್ಕಾಗಿ 21ನೆಯ ಸಲ ಭೂಪ್ರದಕ್ಷಿಣೆ ಕೈಗೊಳ್ಳುವನು. ದಶರಥನು ಪ್ರತಿಸಲದಂತೆ ವಿವಾಹ ಕಂಕಣಬದ್ಧನಾಗಿ, ಜನಕನು ಪೂಜಾನಿರತನಾಗಿ ಬದುಕುವರು. ಜಯಸೇನನು ಪರಶುರಾಮನಿಂದ ಬದುಕಲು ಪೂಜಾ ಮಂದಿರ ಸೇರುತ್ತಿದ್ದ. ಆದರೆ ಈ ಸಲ ಹತನಾದ ವಿಜಯಸೇನ ಪ್ರತಿಸಲವೂ ಮದುವೆಯಾಗಿ ಭಾರ್ಗವನಿಂದ ಬದುಕುತ್ತಿದ್ದ. 20ನೆಯ ಸಲ ಗೌರಿ ಎಂಬವಳನ್ನು ಬಲಾತ್ಕಾರದಿಂದ ವಿವಾಹವಾಗಿದ್ದ. ಇನ್ನು ಮುಂದೆ ಬಲಾತ್ಕಾರದಿಂದ ಮದುವೆಯಾದರೆ ರಾಮನು ನಿನ್ನ ತಲೆ ಕಡಿಯಲೆಂದು ಶಪಿಸಿ ಸತ್ತಿದ್ದಳು. ಹೀಗೆ ಚಿಂತಾಕ್ರಾಂತನಾಗಿದ್ದ ಸಂದರ್ಭನಾರದ ಬಂದು ವಿಜಯನಿಗೆ ಧೈರ್ಯ ಹೇಳಿ, ಯುದ್ಧಕ್ಕೆ ಸಿದ್ಧನಾಗುವಂತೆ ಹೇಳಿದ. ವಿಜಯೆಯನ್ನು ಭೂದೇವಿಯನ್ನು ಒಲಿಸಲು ತಪಸ್ಸಿಗೆ ಕಳುಹಿಸಿದ. ವಿಜಯಸೇನ ರಾಮನಲ್ಲಿ ಯುದ್ಧ ಮಾಡಿ ಮಡಿದ. ವಿಜಯೆ ಭೂದೇವಿಯನ್ನು ಮೆಚ್ಚಿಸಿ ರಾಜ್ಯಕ್ಕೆ ಮರಳಿದಳು. ಕಾಲನರನೆಂಬವನು ಹೆಣ್ಣು ವೇಷ ಹಾಕಿ ಬದುಕುತ್ತಿದ್ದವ ಈ ಸಲ ಹತನಾದ. ಭೂದೇವಿ ರಾಜರನ್ನು ಕೊಲ್ಲುವ ಕೆಲಸ ಬಿಡೆಂದು ರಾಮನಲ್ಲಿ ಪ್ರಾರ್ಥಿಸಿದಾಗ ರಾಮಧಿಃಕ್ಕರಿಸಿದ. ಅವಳು ಶಿವನಲ್ಲಿ ದೂರಿದಳು. ಕಾರ್ತಿವೀರ್ಯನ ಮಗ ಕೇತುಮತಿ ಎಂಬವ ಮಾಂತ್ರಿಕನ ವೇಷದಿಂದ, ಅಳಿದುಳಿದ ರಾಜರನ್ನು ಹುರಿದುಂಬಿಸುತ್ತಿದ್ದವ ರಾಮನನ್ನು ನೋಡಿಯೇ ಸತ್ತ. ಶಿವನು ಷಣ್ಮುಖಾದಿಗಳೊಡನೆ

ಬಂದು ರಾಮನನ್ನು ತಡೆದ. ಇಬ್ಬರೂ ಕಾದಲಣಿಯಾದಾಗ ನಾರದ ಬಂದು ತಡೆದು "ಕ್ಷತ್ರಿಯಾಂತಕ" ಎಂಬ ಬಿರುದಿತ್ತ.

ಶಿವಚಂದ್ರ :
ಆಂಡಯ್ಯ ಕವಿಯ "ಕಬ್ಬಿಗರಕಾವಾಧಾರಿತ ಪ್ರಸಂಗವಿದು. ಗೌರೀವಿರಹದಿಂದ ಹರನು ದುಃಖದಲ್ಲಿ ಇರಲು ತಲೆಯಲ್ಲಿದ್ದ ಚಂದ್ರನು ತಪ್ಪಿಸಿಕೊಂಡು ಮಾರನ ಮರೆಸೇರುತ್ತಾನೆ. ಇದನ್ನು ತಿಳಿದ ಶಿವನು ಶಶಿಯನ್ನು ಬಂಧಿಸುತ್ತಾನೆ. ಶಿವ ಮನ್ಮಥರೊಳಗೆ ಯುದ್ಧ ನಡೆಯುತ್ತದೆ. ಶಿವನು ಮಾರನಿಗೆ "ನನೆಯಂಬ"ನಾಗಿ ಹುಟ್ಟೆಂದು ಶಪಿಸಿದರೆ, ಮದನನು ಹರನಿಗೆ "ಅರ್ಧನಾರೀಶ್ವರ"ನಾಗೆಂದು ಶಾಪಕೊಡುತ್ತಾನೆ.

ಲಕ್ಷ್ಮೀಶಾಪ :
ಅದ್ಭುತ ರಾಮಾಯಣದ ಕಥೆಯಿದು. ಹರಿಯು ಲಕ್ಷ್ಮಿಯೊಡನೆ ವೈಕುಂಠದಲ್ಲಿರಲು ತುಂಬುರನನ್ನು ಕರೆಸಿ ಸಂಗೀತ ಗೋಷ್ಠಿ ನಡೆಸುವನು. ತುಂಬುರನ ಗಾನದಿಂದ ಸಂತುಷ್ಟರಾಗಿ, ಅವನಿಗೆ ಬಹುಮಾನವಿತ್ತು ಕಳುಹಿಸಿ ಅಂತಃಪುರ ಸೇರುವರು. ತುಂಬುರನನ್ನು ಕರೆಸಿ, ತನ್ನನ್ನಪಮಾನಿಸಿದರೆಂದು ಕೋಪಗೊಂಡ ನಾರದ ವೈಕುಂಠಕ್ಕೆ ಬಂದು, ಲಕ್ಷ್ಮಿಯಿಂದ ದೂಡಿಸಲ್ಪಟ್ಟು ರಕ್ಕಸಿಯ ಹೊಟ್ಟೆಯಲ್ಲಿ ಹುಟ್ಟು ಎಂದು ಲಕ್ಷ್ಮಿಗೆ ಶಾಪಕೊಟ್ಟನು. ಮತ್ತೆ ಅವಳಪೇಕ್ಷೆಯಂತೆ ಋಷಿರಕ್ತ ಕುಡಿದ ಹೊಟ್ಟೆಯಲ್ಲಿ ಹುಟ್ಟೆಂದು ಮರುಶಾಪವಿತ್ತನು.

ಸೀತಾ ಜನನ :
ಅದ್ಭುತ ರಾಮಾಯಣದ ಕಥೆಯಿದು. ರಾವಣನು ದಿಗ್ವಿಜಯಕ್ಕೆ ಹೊರಟವನು ಕಾಡಿಗೆ ಹೋಗಿ ಮುನಿಗಳನ್ನು ಹಿಂಸಿಸಿ ರಕ್ತವನ್ನು ಸಂಗ್ರಹಿಸಿ ತಂದು, ಇದು ಮಹಾವಿಷವೆಂದು ಹೇಳಿ, ಮಂಡೋದರಿಯಲ್ಲಿ ಜೋಪಾನ ಮಾಡಲು ಹೇಳಿ ಮತ್ತೆ ಜೈತ್ರಯಾತ್ರೆಗೆ ಹೋಗುತ್ತಾನೆ. ರಾವಣನ ಕೆಟ್ಟ ಕಾರ್ಯದಿಂದನೊಂದ ಮಂಡೋದರಿ ಸಾಯಲು ಈ ರಕ್ತವನ್ನು ಕುಡಿಯುತ್ತಾಳೆ. ಆದರೆ ನಾರದರು ಲಕ್ಷ್ಮಿಗಿತ್ತ ಶಾಪಕ್ಕನುಸಾರ ಸಿರಿಯು ಮಂಡೋದರಿಯು ಹೊಟ್ಟೆಯಲ್ಲಿ ಹುಟ್ಟುತ್ತಾಳೆ. ಪತಿಯಿಲ್ಲದಾಗ ಗರ್ಭವತಿಯಾದ ಮಂಡೋದರಿ ಹೆದರಿ ಶಿಶುವನ್ನು ಸಮುದ್ರಕ್ಕೆ ಎಸೆಯುತ್ತಾಳೆ. ಅದು ಮತ್ತೆ ಜನಕನಿಗೆ ಸಿಕ್ಕಿ "ಸೀತೆ"ಯಾಗಿ ಬೆಳೆಯುತ್ತದೆ.

ಶಂಬರ ವಧೆ :
ರಾಮಾಯಣದಿಂದ ಆರಿಸಲಾಗಿದೆ. ಶಂಬರನು ನಾಕವನ್ನಾಕ್ರಮಿಸಲು ಇವನನ್ನು ಕೊಲ್ಲಲು ದಶರಥನ ಸಹಾಯವನ್ನು ಕೇಳುತ್ತಾನೆ. ದಶರಥನು ಕೈಕೆಯೊಡನೆ ದೇವಲೋಕಕ್ಕೆ ಹೋಗಿ ಶಂಬರನನ್ನು ಕೊಲ್ಲುತ್ತಾನೆ. ಯುದ್ಧದಲ್ಲಿ ಸಹಾಯ ಮಾಡಿದ ಕೈಕೆಗೆ ಎರಡು ವರ ಕೊಡುತ್ತಾನೆ.

ಸುಧನ್ವಾವಸಾನ :
ರಾಮಾಯಣದಿಂದ ಈ ಕಥಾಭಾಗವನ್ನು ಆರಿಸಲಾಗಿದೆ. ಜನಕನ ಮಗಳು ಸೀತೆ. ಅವಳ ಲಾವಣ್ಯಾತಿಶಯವನ್ನು ಕೇಳಿದ ಸಾಂಕಾಶ್ಯಪತಿ ಸುಧನ್ವ ಅವಳನ್ನು ತನಗೆ ಕೊಡುವಂತೆ ಜನಕನಿಗೆ ಪತ್ರ ಬರೆಯುತ್ತಾನೆ. ಅವನು ತಿರಸ್ಕರಿಸಿದಾಗ, ಅವನಲ್ಲಿ ಯುದ್ಧಮಾಡಿ ಮಡಿಯುತ್ತಾನೆ. ಅಲ್ಲಿ ಕುಶಧ್ವಜ ರಾಜನಾಗುತ್ತಾನೆ.

ವೇದವತೀ ಶಾಪ :
ವೇದವತಿ ಕುಶಧ್ವಜನ ಮಗಳು. ತಂದೆಯ ಮತದಂತೆ ಹರಿಯನ್ನು ವರಿಸಲು ತಪಸ್ಸಿನಲ್ಲಿರುವಳು. ಅಲ್ಲಿಗೆ ಬಂದ ರಾವಣ ಅವಳನ್ನು ಮೋಹಿಸಿ ಬಲಾತ್ಕರಿಸಲು ಅವನಿಗೆ ಶಾಪವಿತ್ತು ಯೋಗಾಗ್ನಿಯಲ್ಲಿ ಅಳಿಯುವಳು.

ರಾವಣ ದಿಗ್ವಿಜಯ :
ರಾಮಾಯಣದ ಕಥೆ. ರಾವಣನು ದಿಗ್ವಿಜಯಕ್ಕೆ ಹೋಗಿ ಯಾಗದಲ್ಲಿದ್ದ ಮರುತ್ತನನ್ನು, ಅನರಣ್ಯನನ್ನು ಕೊಲ್ಲುತ್ತಾನೆ. ಮುಂದೆ ಬಲಿಯಲ್ಲಿ ಯುದ್ಧ ಮಾಡಿ ಸೋತು ಜೀವದಾನ ಪಡೆದು ಅವನ ಅನುಗ್ರಹದಂತೆ ಲಂಕೆಗೆ ಹಿಂದಿರುಗುತ್ತಾನೆ.

ಊರ್ಮಿಳೆ :
ರಾಮಾಯಣದಿಂದ ಈ ಕಥೆಯನ್ನು ಆರಿಸಲಾಗಿದೆ. ವರ ಕೇಳಿದ ಕೈಕೆಯ ದೆಸೆಯಿಂದ ದಶರಥ ಮೂರ್ಛಿತನಾಗಲು ರಾಮನು ಬಂದು ಕೈಕೆಯನ್ನು ಸಂತೈಸಿ ಕಾಡಿಗೆ ಹೊರಡಲು ಲಕ್ಷ್ಮಣನೂ ಹೊರಡುವನು. ಸೌಮಿತ್ರಿಯ ವನಾಗಮನ ವೃತ್ತಾಂತವರಿತ ಊರ್ಮಿಳೆ ಅವನನ್ನು ತಡೆದು ತಾನೂ ಕಾಡಿಗೆ ಬರುವೆನೆಂದು ಹೇಳುವಳು. ಅವಳನ್ನು ಲಕ್ಷ್ಮಣನು ಸಂತೈಸಿ ತೆರಳಲು ರಾಮನು ಬಂದು ಅವಳನ್ನು ಹರಸುವನು. ಮತ್ತೆ ಅವಳು ವಸಿಷ್ಠಾಶ್ರಮಕ್ಕೆ ತೆರಳುವಳು.

ಗುರುದಕ್ಷಿಣೆ :
ಈ ಕಥೆಯನ್ನು ಭಾಗವತದಿಂದ ಆರಿಸಲಗಿದೆ. ಬಲರಾಮ ಕೃಷ್ಣರು ಸಾಂದೀಪನಿಯನ್ನು ಬೀಳ್ಕೊಂಡು, ವರುಣನಲ್ಲಿಗೆ ಬಂದು ಮಡಿದ ಗುರುಪುತ್ರನನ್ನೂ ಕೇಳುವರು. ವರುಣನು ಗರ್ವದಿಂದ ಸೆಣಸಾಡಿ ಸೋತು ಪಂಚಜನಾಸುರನನ್ನು ತೋರಿಸುವನು ಮುಂದೆ ಪಂಚಜನನನ್ನು ಕೊಂದು ಅವನೆಲುಬಿನಿಂದ ಪಾಂಚಜನ್ಯವನ್ನು ಮಾಡಿ ಹರಿಧರಿಸುವನು. ಆಮೇಲೆ ಯಮಲೋಕಕ್ಕೆ ಹೋಗಿ, ಯಮನನ್ನು ಸೋಲಿಸಿ, ಅವನಿಂದ ಗುರುಸುತನನ್ನು ಪಡೆದು, ಅವನನ್ನು ಗುರುದಕ್ಷಿಣೆಯಾಗಿ ಸಾಂದೀಪನಿಗೆ ಒಪ್ಪಿಸುವರು.

ಅಭಯ ಪ್ರದಾನ :
ಈ ಕಥೆಯನ್ನು ಭಾಗವತದಿಂದ ಆರಿಸಲಾಗಿದೆ. ಅಳಿಯ ಕಂಸನ ವಧದಿಂದ ಕೆರಳಿದ ಮಾಗಧನು ಚೈದ್ಯ, ಬಾಣಾಸುರರನ್ನೊಡಗೂಡಿ, ಮಧುರೆಯನ್ನು ಮುತ್ತಿ ಬಲರಾಮ ಕೃಷ್ಣರಲ್ಲಿ ಸೆಣಸಿ ಸೋಲುವನು. ಬಲರಾಮನಿಂದ ಅಭಯವನ್ನು ಪಡೆದು ಸ್ವರಾಜ್ಯಕ್ಕೆ ಹಿಂದಿರುಗುವನು.

ಸಾಲ್ವವಧ :
ಇದನ್ನು ಭಾಗವತದಿಂದ ಆರಿಸಲಾಗಿದೆ. ಬಲರಾಮನು ಗೋಪಿಕಾಸ್ತ್ರೀಯರೊಂದಿಗೆ ಯಮುನಾತೀರಕ್ಕೆ ಬಂದು ಜಲಕೇಳಿಯಾಡಿ ಹಿಂತಿರುಗುತ್ತಾನೆ. ಆಗ ಸಾಲ್ವನು ಸೌಭವಿಮಾನವನ್ನು ಪಡೆದು ದ್ವಾರಕೆಯನ್ನು ಆಕ್ರಮಿಸುತ್ತಾನೆ. ಮಾಯಾ ಯುದ್ಧವೆಸಗುತ್ತಾನೆ. ಕೃಷ್ಣನು ಆಗ ಇಂದ್ರಪ್ರಸ್ಥದಲ್ಲಿರುತ್ತಾನೆ. ಸಾಲ್ವನ ಯುದ್ಧ ವಿಚಾರವನ್ನರಿತ ಅವನು ಕೂಡಲೇ ದ್ವಾರಕೆಗೆ ಬಂದು ಸಾಲ್ವನೊಡನೆ ಸೆಣಸಲು ಮುಂದಾಗುತ್ತಾನೆ. ಆಗ ಸಾಲ್ವನು ಮಾಯಾ ವಸುದೇವನನ್ನು ಸೃಷ್ಟಿಸಿ ಕೃಷ್ಣನೆದುರು ಕೊಲ್ಲುತ್ತಾನೆ. ದುಃಖಿತನಾದ ಕೃಷ್ಣನು, ಬಲರಾಮನ ಮೂಲಕ ಕಪಟವಿದೆಂದು ತಿಳಿದು ಸಾಲ್ವನನ್ನು ಕೊಲ್ಲುತ್ತಾನೆ.

ಸುದಕ್ಷಿಣ ವಧ :
ಈ ಕಥಾ ಭಾಗವನ್ನು ಕನ್ನಡವಚನ ಭಾಗವತದಿಂದ ಆರಿಸಲಾಗಿದೆ. ವಾಸುದೇವ ಪೌಂಡ್ರಕನ ಮಗನಾದ ಸುದಕ್ಷಿಣನು ಪಿತೃವಧೆಯ ಸೇಡನ್ನು ತೀರಿಸಲು ಮುಂದಾಗುತ್ತಾನೆ. ಅವನ ಮಡದಿ ಕುಮುದೆಯು ತಡೆದರೂ ತನ್ನ ಇಷ್ಟದೈವವಾದ ರುದ್ರನನ್ನು ಆರಾಧಿಸುತ್ತಾನೆ. ರುದ್ರನು ಬಲರಾಮ ಕೃಷ್ಣರನ್ನು ಕೊಲ್ಲಲು "ಅಭಿಚಾರ ಕೃತ್ತಿ"ಯನ್ನು ಸೃಷ್ಟಿಸುತ್ತಾನೆ. ಅಭಿಚಾರ ಕೃತ್ತಿಯು ಬೇತಾಳನೊಡನೆ ಬಂದು ದ್ವಾರಕೆಯನ್ನೇ ಆಕ್ರಮಿಸುತ್ತಾನೆ. ಯುದ್ಧ ನಡೆಯುತ್ತದೆ. ಕಡೆಗೆ ಕೃಷ್ಣನು "ಸುದರ್ಶನ"ವನ್ನು ರಣಕ್ಕೆ ಕಳುಹಿಸುತ್ತಾನೆ. ಸುದರ್ಶನವು ಅಭಿಚಾರ ಕೃತ್ತಿ, ಬೇತಾಳರನ್ನು ಕೊಂದು ಆಮೇಲೆ ಕಾಶೀಪುರಕ್ಕೆ ಹೋಗಿ ಸುದಕ್ಷಿಣನನ್ನು ಕೊಲ್ಲುತ್ತದೆ.

ದ್ರುಪದ ಗರ್ವಭಂಗ :
ಈ ಕಥಾಭಾಗವನ್ನು ಮಹಾಭಾರತದಿಂದ ಆರಿಸಲಾಗಿದೆ. ಕೋಲಗುರುವಾದ ದ್ರೋಣಾಚಾರ್ಯನು "ಗುರುದಕ್ಷಿಣೆ"ಯಾಗಿ ದ್ರುಪದನನ್ನು ಹೆಡೆಮುರಿಕಟ್ಟಿ ತಂದೊಪ್ಪಿಸುವಂತೆ ಕೌರವರಲ್ಲಿ ಹೇಳುತ್ತಾನೆ. ಅದರಂತೆ ದುರ್ಯೋಧನಾದಿಗಳು ಪಾಂಚಾಲಕ್ಕೆ ಹೋಗಿ ದ್ರುಪದಲ್ಲಿ ಹೋರಾಡಿ ಸೋಲುತ್ತಾರೆ. ಇದನ್ನು ತಿಳಿದ ದ್ರೋಣಾಚಾರ್ಯನು ಪಾಂಡವರಲ್ಲಿ ದ್ರುಪದನನ್ನು ಕಟ್ಟಿತರಲು ಹೇಳುತ್ತಾನೆ. ಅದರಂತೆ

ಪಾಂಡವರು ದ್ರುಪದನನ್ನು ಕಟ್ಟಿತಂದು ದ್ರೋಣನಿಗೆ ಒಪ್ಪಿಸುತ್ತಾರೆ. ದ್ರೋಣಾಚಾರ್ಯನ ಪ್ರತಿಜ್ಞೆ ಪೂರೈಸುತ್ತದೆ.

ಶ್ವೇತಾವಸಾನ :
ಕಥಾ ಭಾಗವನ್ನು ಭಾರತದಿಂದ ಆರಿಸಲಾಗಿದೆ. ಕೌರವ ಪಾಂಡವರಲ್ಲಿ ಯುದ್ಧಾರಂಭದ ದಿನ, ಯುಧಿಷ್ಠಿರನು ಭೀಷ್ಮ ದ್ರೋಣಾದಿಗಳಿಗೆರಗಿ ಅನುಗ್ರಹ ಪಡೆಯುತ್ತಾನೆ. ರಣ ಆರಂಭವಾಗಿ ವಿರಾಟನ ಮಗ ಉತ್ತರ ಮಡಿಯುತ್ತಾನೆ. ಬಳಿಕ ವಿರಾಟನ ಮಗ ಶ್ವೇತ ಯುದ್ಧಕ್ಕೆ ಬಂದು ಎಲ್ಲರನ್ನೂ ಸೋಲಿಸಿ ಆ ಮೇಲೆ ಭೀಷ್ಮನಲ್ಲಿ ಅಳಿಯುತ್ತಾನೆ.

ಸುಷೇಣ ವಧೆ :
ಈ ಕಥೆಯನ್ನು ಭಾರತದಿಂದ ಆರಿಸಲಾಗಿದೆ. ಕರ್ಣನ ಮಗ ಸುಷೇಣನು ಯುದ್ಧರಂಗಕ್ಕೆ ಬಂದು ಭೀಮನಲ್ಲಿ ಸೆಣಸಾಡಿ ಸಾಯುತ್ತಾನೆ.

ಸೌಬಲ ವಧೆ :
ಈ ಕಥೆಯನ್ನು ಭಾರತದಿಂದ ಆರಿಸಲಾಗಿದೆ. ಸೆಣಸಿ ಕೌರವನು ಕಾಣದಾಗಲು ಯುಧಿಷ್ಠಿರನು ಚಿಂತಿತನಾಗಲು ಸಹದೇವನು ಸಂತೈಸುತ್ತಾನೆ. ಬಳಿಕ ರಣರಂಗದಲ್ಲಿ ಅವನನ್ನು ಹುಡುಕುತ್ತಾರೆ. ಉಲೂಕನು ನಕುಲನಿಂದ ಹತನಾಗಲು, ಶಕುನಿಯು ಅಳಿದುಳಿದ ಸೇನೆಯೊಡನೆ ಯುದ್ಧಕ್ಕೆ ಬರುತ್ತಾನೆ. ಸಹದೇವನು ಅವನನ್ನೂ ಕೊಲ್ಲುತ್ತಾನೆ.

ಊರ್ವಶೀ ಶಾಪ :
"ಷೋಡಶರಾಜರ ಕಥೆ"ಯಿಂದ ಈ ಕಥಾನಕವನ್ನಾರಿಸಲಾಗಿದೆ. ಇಂದ್ರಸಭೆಯಲ್ಲಿ ಊರ್ವಶಿಯು ನರ್ತಿಸಿ ಬರುವಾಗ ದಾರಿಯಲ್ಲಿ ದೂರ್ವಾಸರೆಂದು ತಿಳಿಯದೆ, ಗಾಳಿಗೆ ಹಾರುತ್ತಿದ್ದ ಸೆರಗು ಅವರ ಮುಖಕ್ಕೆ ತಾಗಿತು. ಮಾನವರಿಂದ ಅಪಮಾನಿತಳಾಗೆಂದು ಶಪಿಸಿದರು. ಮಾಳವ ದೇಶದ ರಾಜಹಂಸಪಾದನ ಮಗರಾಜಹಂಸನು ಸಕಲ ವಿದ್ಯೆಗಳನ್ನು ಮುನಿದೀರ್ಘಸಾಧುವಿನಿಂದ ಪಡೆದು, ಚಂದ್ರಾಯುಧವೆಂಬ ದಿವ್ಯಾಸ್ತ್ರವನ್ನು ತನ್ನದಾಗಿಸಿದನು. ಗುರುವಿನ ಆಜ್ಞೆಯಂತೆ ಗತಿಸಿದ ದೀರ್ಘಸಾಧುವಿನ ಅಂತ್ಯ ಸಂಸ್ಕಾರ ಮಾಡಿ ಮೂರು ವರ್ಷದ ಭೂ ಸಂಚಾರಕ್ಕಾಗಿ ಹೊರಟು, ವಾಲ್ಮೀಕಿಯಲ್ಲಿಗೆ ಬಂದನು. ಅಲ್ಲಿ ವೇದಾಂತಾದಿ ವಿಚಾರಗಳನ್ನು ಕಲಿತು, ಅವರ ಆದೇಶದಂತೆ ತನ್ನ ದೇಶವಾದ ಮಾಳವಕ್ಕೆ ಹಿಂತಿರುಗುವಾಗ ದಾರಿಯಲ್ಲಿ ವ್ರಜ ಪುರಕ್ಕೆ ಬಂದನು ಅಲ್ಲಿ ಕಾರ್ತಿಕೇಯನ ಮಗಳಾದ ಕಂಜಾಕ್ಷಿಯನ್ನು ವರಿಸಿದನು. ಉಪವನದಲ್ಲಿ ರಾತ್ರಿ ಪವಡಿಸಿದ್ದ ಕಾರ್ತಿಕೇಯನ ಮಗ ಕಂಜಾಕ್ಷನನ್ನು ಅಲ್ಲಿಗೆ ಬಂದ ರಂಭೆ ಊರ್ವಶಿಯರಲ್ಲಿ ಊರ್ವಶಿಯು ಸೊಕ್ಕಿನಿಂದ ಸಾಯಿಸಿದಳು. ಹೆಣವನ್ನು ಪುರವಲಯದ ಹೊರಗಿರುವ ಬೇತಾಳನಿಗೆ

ಕೊಡುವ ಪದ್ಧತಿಯಿದ್ದು ಸತ್ತ ಮಗನ ಬಗ್ಗೆ ದುಃಖಿತನಾದ ಕಾರ್ತಿಕೇಯನಿಗೆ ಧೈರ್ಯಹೇಳಿ ಕಂಜಾಕ್ಷನ ಹೆಣವನ್ನು ಸುಡುಗಾಡಿನಲ್ಲಿರಿಸಿ ತಾನೆ ಕಾವಲಿಗೆ ನಿಂತನು. ವಿಚಾರ ತಿಳಿದ ಬೇತಾಳ ಅಲ್ಲಿಗೆ ಬಂದು ರಾಜಹಂಸನಲ್ಲಿ ಸೆಣಸಿ ಸೋತು ಶರಣಾದನು. ಅಪ್ಸರಲ್ಲಿ ರಂಭೆಯ ಒತ್ತಾಯಕ್ಕೆ ಮಣಿದ ಊರ್ವಶಿ ಕಂಜಾಕ್ಷನನ್ನು ಬದುಕಿಸಿದಳು. ಇವರ ಸಂಭಾಷಣವನ್ನು ಕೇಳಿದ ರಾಜಹಂಸ, ಊರ್ವಶಿಯ ರೆಕ್ಕೆಯನ್ನು ಕಳಚಿದನು. ಅಸಹಾಯಕಳಾದ ಊರ್ವಶಿ ರಾಜಹಂಸನ ಮರೆಸೇರಿ ಸಾಕಷ್ಟು ಅಪಮಾನಿತಳಾಗಿ ರೆಕ್ಕೆಯನ್ನು ಪಡೆದು ನಾಕಕ್ಕೆ ಹೋದಳು. ರಾಜಹಂಸ ಕಂಜಾಕ್ಷರು ಅರಮನೆಗೆ ಬಂದು ಕಾರ್ತಿಕೇಯನಿಗೆ ವಿಚಾರ ತಿಳಿಸಿ, ಸುಖವಾಗಿ ಇದ್ದರು.

ಶತಧನ್ವ ವಧೆ :

ಭಾಗವತದ ಕಥೆಯಿದು. ಸತ್ರಾಜಿತನು ಸ್ಯಮಂತಕ ಮಣಿಯನ್ನು ಪಡೆಯುತ್ತಾನೆ. ಸತ್ಯಭಾಮೆ ಇವನ ಮಗಳು. ಶತಧನ್ವನು ಸತ್ಯಭಾಮೆಯ್ನ ಮದುವೆ ಮಾಡಿಕೊಡುವಂತೆ ಕೇಳುತ್ತಾನೆ. ಸತ್ರಾಜಿತ ಅವನಿಗೆ ಕೊಡದೆ ಕೃಷ್ಣನಿಗೆ ಕೊಡುತ್ತಾನೆ. ಆ ಮೇಲೆ ಸ್ಯಮಂತಕ ಮಣಿಯನ್ನೂ ಕೇಳುತ್ತಾನೆ. ಕೊಡದಿರಲು ರಾತ್ರಿಹೋಗಿ ನಿದ್ರಿಸಿದ್ದ ಸತ್ರಾಜಿತನನ್ನು ಕೊಂದು ಮಣಿಯನ್ನು ಕೊಂಡೊಯ್ಯುತ್ತಾನೆ. ಇದನ್ನು ತಿಳಿದ ಕೃಷ್ಣನು ಶತಧನ್ವನನ್ನು ಕೊಲ್ಲುತ್ತಾನೆ.

ಸಾಂಬವಿವಾಹ

ಭಾಗವತದ ಕಥೆ. ದುರ್ಯೋಧನನ ಮಗಳಾದ ಲಕ್ಷ್ಮಣೆಯ ಸ್ವಯಂವರಕ್ಕೆ ಹೋದ ಸಾಂಬನು, ಅವಳನ್ನು ಸೆಳೆದೊಯ್ಯುತ್ತಾನೆ. ಕೌರವಾದಿಗಳು ಸೇರಿ ಅವನನ್ನು ಯುದ್ಧದಲ್ಲಿ ಸೋಲಿಸಿ ಸೆರೆಯಲ್ಲಿಡುತ್ತಾರೆ. ವಿಷಯ ತಿಳಿದ ಬಲರಾಮ ಬಂದು, ಕ್ರುದ್ಧನಾಗಿ ಹಸ್ತಿನಾವತಿಯನ್ನೇ ಗಂಗಾನದಿಗೆ ಸೆಳೆದು ಬಿಸಾಡಲು ಸಿದ್ಧನಾಗುತ್ತಾನೆ. ಬೆದರಿದ ಕೌರವ ಸಾಂಬನಿಗೆ ಲಕ್ಷ್ಮಣೆಯನ್ನು ಕೊಟ್ಟು ಮದುವೆ ಮಾಡುತ್ತಾನೆ.

ಲೇಖಕರ ಪ್ರಕಟಿತ ಕೃತಿಗಳು

1. ದೀವಿಗೆ - (ಕವನಸಂಕಲನ)
2. ಸುಮಹಾರ - (ಕವನಸಂಕಲನ)
3. ಪ್ರೇಮ-ಕಾಮ (ಕವನಸಂಕಲನ)
4. ಬಾಲವಾಡಿ (ಮಕ್ಕಳಪದ್ಯಗಳು)
5. ಗೀತಿಕೆ (ಮಕ್ಕಳ ಪದ್ಯಗಳು)
6. ಗುರುಕೃಷ್ಣ (ಜೀವನಚರಿತ್ರೆ)
7. ಸತ್ಯಮೂರ್ತಿಕರ್ಣ (ಗೀತರೂಪಕ)
8. ಅಮೃತವರ್ಷಿಣಿ (ಕರ್ಹಾಡೀ ಭಾಷಾಕವನ ಸಂಕಲನ)
9. ಕವನಾಂಸೋರು (ಕರ್ಹಾಡೀ ಭಾಷಾ ಕವನ ಸಂಕಲನ)
10. ಸೃಗಾಲವಧೆ (ತುಳು ಯಕ್ಷಗಾನ ಅರ್ಥ ಸಹಿತ)
11. ಸತ್ಯಸೇನ ವಧಃ (ಸಾರ್ಥ ಸಂಸ್ಕೃತ ಯಕ್ಷಗಾನಂ)
12. ಊರ್ಮಿಳಾ (ಸಾರ್ಥಸಂಸ್ಕೃತ ಯಕ್ಷಗಾನಂ)
13. ಕಂಸವಧಃ (ಸಂಸ್ಕೃತ ಯಕ್ಷಗಾನಂ)
14. ಶಿವಲೀಲಾ (ಸಂಸ್ಕೃತ ಯಕ್ಷಗಾನಂ)
15. ವೀರಸುಷೇಣ(ಸಾರ್ಥ ಹಿಂದೀ ಯಕ್ಷಗಾನ)
16. ಭಕ್ತಧ್ರುವ (ಹಿಂದೀಯಕ್ಷಗಾನ)
17. ಸ್ಲೇಯಿಂಗ್ ಆಫ್ ಸುಧನ್ವ (ಸಾರ್ಥ ಇಂಗ್ಲಿಷ್ ಯಕ್ಷಗಾನ)
18. ಪುತ್ತೂರು ಶ್ರೀ ಮಹಾಲಿಂಗೇಶ್ವರ ಸುಪ್ರಭಾತ (ಕನ್ನಡ)
19. ಕೊಲ್ಲೂರು ಶ್ರೀ ಮೂಕಾಂಬಿಕಾಸ್ತವಃ (ಸಂಸ್ಕೃತ)
20. ಮಲ್ಲ ಶ್ರೀ ದುರ್ಗಾಪರಮೇಶ್ವರೀ ಸುಪ್ರಭಾತಂ (ಸಂಸ್ಕೃತ)
21. ಕಟೀಲು ಶ್ರೀ ದುರ್ಗಾಪರಮೇಶ್ವರೀ ಸುಪ್ರಭಾತಂ (ಸಂಸ್ಕೃತ)
22. ಬೆಟ್ಟಂಪಾಡಿ ಶ್ರೀ ಮಹಾಲಿಂಗೇಶ್ವರ ಸ್ತೋತ್ರಂ (ಸಂಸ್ಕೃತ)
23. ಕೊಲ್ಲ್ಯ ಶ್ರೀ ಮೂಕಾಂಬಿಕಾ ಸ್ತೋತ್ರಂ (ಸಂಸ್ಕೃತ)
24. ಶ್ರೀ ಶಿಶಿಲೇಶ್ವರ ಸುಪ್ರಭಾತಂ (ಸಂಸ್ಕೃತ)
25. ಭಜನ ಮಾಲಿಕೆ (ಭಜನೆ ಪದ್ಯಗಳು)
26. ದಕ್ಷಿಣ ಕನ್ನಡ ಮತ್ತು ಕಾಸರಗೋಡು - ಕರ್ಹಾಡ ಬ್ರಾಹ್ಮಣರು ಒಂದು ಅಧ್ಯಯನ (ಸಂಶೋಧನ ಗ್ರಂಥ)
27. ಕರ್ಹಾಡೀ ರಾಮಾಯಣ (ಆರು ಕಾಂಡಗಳು - ಮಹಾಕಾವ್ಯ)
28. ಕರ್ಹಾಡೀ ರಾಮಾಯಣ (ಉತ್ತರಕಾಂಡ - ಮಹಾಕಾವ್ಯ)
29. ನಳ ಚರಿತ್ರೆ (ಕನ್ನಡ ಯಕ್ಷಗಾನ)

30. रणतांबूल An Invitation to war (Hindi, English, Yakshagana)
31. ರಾವಣ ದಿಗ್ವಿಜಯ – (ಕರ್ಾಡೀ ಯಕ್ಷಗಾನ)
32. ಸತ್ಯಸೇನವಧ (ಸಾರ್ಥ ಕೊಂಕಣೀ ಭಾಷಾ ಯಕ್ಷಗಾನ)
33. ಪಾಂಚಜನ್ಯ (ಸಾರ್ಥ ಮರಾಠೀ ಭಾಷಾ ಯಕ್ಷಗಾನ)
34. ಪಂಚಕೊ (ತುಳು ಯಕ್ಷಗಾನಗಳು)
35. ರಾಮಾನುಗ್ರಹ (ಸಾರ್ಥ ಹವ್ಯಕ ಭಾಷಾ ಯಕ್ಷಗಾನ)

ಪ್ರಕಟಿತ ಧ್ವನಿಸುರುಳಿಗಳು

1. ಪುತ್ತೂರು ಶ್ರೀ ಮಹಾಲಿಂಗೇಶ್ವರ ಸುಪ್ರಭಾತ (ಕನ್ನಡ)
2. ಪುತ್ತೂರು ಶ್ರೀ ಮಹಾಲಿಂಗೇಶ್ವರ ಸುಪ್ರಭಾತೊ (ತುಳು)
3. ಆವಳ ಶ್ರೀ ದುರ್ಗಾಪರಮೇಶ್ವರೀ ಸುಪ್ರಭಾತಣೆ – ಭಕ್ತಿಗೀತ (ಕರ್ಾಡಿ)
4. ಅಗಲ್ಪಾಡಿ ಶ್ರೀ ದುರ್ಗಾಪರಮೇಶ್ವರೀ ಸುಪ್ರಭಾತಣೆ – ಭಕ್ತಿಗೀತ (ಕರ್ಾಡಿ)
5. ಅಮೃತವರ್ಷಿಣಿ (ಕರ್ಾಡೀ ಭಾವಗೀತ)
6. ಕಂಸವಧಃ (ಸಂಸ್ಕೃತ ಯಕ್ಷಗಾನಂ)
7. ಶಿವಚಂದ್ರಂ (ಸಂಸ್ಕೃತ ಯಕ್ಷಗಾನಂ)
8. ವೀರಸುಷೇಣ (ಹಿಂದೀ ಯಕ್ಷಗಾನ)
9. ವಿಭೀಷಣ ನೀತಿ (ಹಿಂದೀ ಯಕ್ಷಗಾನ)
10. Slaying of Sudhanva (English Yakshangana)
11. Shree Krishna Sarathya (English Yakshangana)
12. ಪಾರ್ಥ ಪ್ರತಿಜ್ಞ (ಕರ್ಾಡೀ ಯಕ್ಷಗಾನ)
13. ಊರ ಉಳ್ಳಾಲ್ತಿ (ತುಳು ಯಕ್ಷಗಾನ)
14. ಧರ್ಮಣ್ಣನ ಗಡಿಬಿಡಿ (ತುಳು ಯಕ್ಷಗಾನ)
15. ರಾಧಕ್ಕನ ರಾದ್ಧಾಂತೊ (ತುಳು ಯಕ್ಷಗಾನ)
16. ಮರ್ಲ್‌ದ ಪೊರ್ಲು (ತುಳು ಯಕ್ಷಗಾನ)
17. ವೇದಕ್ಕನ ವೇದಾಂತೊ (ತುಳು ಯಕ್ಷಗಾನ)
18. ಚಿತ್ರನ ವಿಚಿತ್ರೊ (ತುಳು ಯಕ್ಷಗಾನ)
19. ಏರ್? (ತುಳು ಯಕ್ಷಗಾನ)